ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY

ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ.
ಹಂಪಿ ಟೈಮ್ಸ್ ಇ-ಪೇಪರ್ ಓದುಗರ ಸಂಖ್ಯೆ
55,000 Plus readers
Place Your Ads
Reach New Audience
9448633038
hampitimes@gmail.com Valmiki Circle, Hosapete-583201

ಸಂಪುಟ:01	ಸಂಚಿಕೆ:294	ನೋಂದಣಿ ನಂ.:KARKAN27911	ವಿಜಯನಗರ	21.04.2024	ಭಾನುವಾರ	ಪುಟ:04	ಬೆಲೆ:2
Volume:01	Issue:294	Reg.No:KARKAN27911	VIJAYANAGARA	21.04.2024	Sunday	Page:04	Rs:2

ಪ್ರಜಾಪ್ರಭುತ್ವ ಗೆಲುವಿಗಿರಲಿ ನಿಮ್ಮ ಮತದಾನ

ರೈತರನ್ನು ಕಡೆಗಣಿಸಬೇಡಿ

ಕುಲಪತಿ ಪ್ರೊ.ವಿಜಯಕುಮಾರ್ ಮಲಶೆಟ್ಟಿ ಹೇಳಿಕೆ

■ ಹಂಪಿ ಟೈಮ್ಸ್ ಬಳ್ಳಾರಿ

ರೈತ ನಮ್ಮ ಸಮಾಜದ ಬೆನ್ನೆಲುಬು. ಅವರ ವೇಷಭೂಷಣಗಳಿಂದ ಕಡೆಗಣಿಸ ಬಾರದು ಎಂದು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ವಿಜಯಕುಮಾರ್ ಬಿ.ಮಲಶೆಟ್ಟಿ ಹೇಳಿದರು.

ನಗರದ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಡಾ.ಬಿ.ಆರ್.ಅಂಬೇಡ್ಕರ್ ಸಭಾಂಗಣದಲ್ಲಿ ಪ್ರದರ್ಶನ ಕಲೆ ನಾಟಕ, ಕನ್ನಡ ಮತ್ತು ಇಂಗ್ಲೀಷ್ ಅಧ್ಯಯನ ವಿಭಾಗಗಳು ಜಂಟಿಯಾಗಿ ಶನಿವಾರ ಆಯೋಜಿಸಿದ್ದ ವಿಶ್ವವಿದ್ಯಾಲಯದಿಂದ ವ್ಯವಸಾಯದೆಡೆಗೆ ಎನ್ನುವ ಘೋಷಣೆಯೊಂದಿಗೆ 'ವಿದ್ಯಾರ್ಥಿ ಮತ್ತು ರೈತರ ದುಂಡುಮೇಜಿನ ಪರಿಷತ್ತು' ಎಂಬ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಆಹಾರ ಉತ್ಪಾದನೆಯಲ್ಲಿ ಕೃಷಿ ಸಬಲೀಕರಣಗೊಳಿಸಲು ಡಾ.ಬಾಬು ಜಗಜೀವನ ರಾಮ್ ಅವರ ಹಸಿರು ಕ್ರಾಂತಿ ಮಹತ್ತರವಾಗಿದೆ. ನಗರೀಕರಣದಿಂದಾಗಿ ಕೃಷಿಯೋಗ್ಯ ಭೂಮಿಯ ಪ್ರಮಾಣ ಕಡಿಮೆಯಾಗುತ್ತಿದೆ. ಮೂಲಸೌಕರ್ಯಗಳ ಕೊರತೆಯಿಂದಾಗಿ ಇಂದು ರೈತರಿಗೆ ದೊಡ್ಡ ಸಮಸ್ಯೆಗಳಾಗಿ ಕೃಷಿಯ ಮೇಲೆ ಪರಿಣಾಮ ಬೀರುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ರೈತರ ಕುರಿತಾಗಿ ವಿಶ್ವವಿದ್ಯಾಲಯದಿಂದ ಆಯೋಜಿಸಿದ ಇದೊಂದು ವಿನೂತನ ಕಾರ್ಯಕ್ರಮವಾಗಿದ್ದು, ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳಿಗಾಗಿ ಕೃಷಿ ಸಂಬಂಧಿತ ಕೋರ್ಸ್‌ಗಳನ್ನು ಆರಂಭಿಸುವ ವಿಚಾರವನ್ನು ಪ್ರಸ್ತಾಪಿಸಿದರು.

ವಿಶ್ವವಿದ್ಯಾಲಯದ ಕುಲಸಚಿವ ಎಸ್.ಎನ್. ರುದ್ರೇಶ್ ಮಾತನಾಡಿ, ವ್ಯವಸಾಯದಲ್ಲಿರುವಷ್ಟು ಸ್ವಾಭಿಮಾನ, ಸ್ವಾತಂತ್ರ್ಯ ಯಾವ ಕೆಲಸದಲ್ಲೂ ಇರುವುದಿಲ್ಲ. ವ್ಯವಸಾಯವನ್ನು ಕೀಳಾಗಿ ಕಾಣದೆ, ಉದ್ಯಮೆಯನ್ನಾಗಿ ಅಳವಡಿಸಿಕೊಂಡರೆ ರೈತರು ಅಭಿವೃದ್ಧಿಯಾಗುತ್ತಾರೆ ಎಂದು ತಿಳಿಸಿದರು.

ರೈತ ಮುಖಂಡ ಮಾಧವರೆಡ್ಡಿ ಮಾತನಾಡಿ, ಕೃಷಿ ಭೂಮಿಯಿರುವ ರೈತರು ಸಾಕಷ್ಟಿದ್ದಾರೆ, ಉಳುಮೆ ಮಾಡುವವರು ಸಂಖ್ಯೆ ಕಡಿಮೆಯಿದೆ.

> ವ್ಯವಸಾಯ ನಮ್ಮ ಜೀವನದ ಭಾಗವಾಗಿದೆ. ರೈತರ ಸಬಲೀಕರಣ ಮತ್ತು ರಕ್ಷಣೆ, ಬೆಲೆ ಭರವಸೆ ಮತ್ತು ಕೃಷಿ ಸೇವೆಗಳು ಸರಿಯಾಗಿ ಸಿಗುತ್ತಿಲ್ಲ. ಕೃಷಿ ಉತ್ಪನ್ನ ಸಂಗ್ರಹ ವ್ಯವಸ್ಥೆಯಿಂದಾಗಿ ಕನಿಷ್ಠ ಬೆಂಬಲ ಸಿಗದಾಗಿದೆ.
> – ಮಲ್ಲಿಕಾರ್ಜುನ ರೆಡ್ಡಿ, ರೈತ ಮುಖಂಡ

ಉದ್ಯೋಗದ ಸಮಸ್ಯೆಗೆ ವೃತ್ತಿಯ ಜೊತೆಗೆ ಕೃಷಿಯನ್ನು ಅಳವಡಿಸಿಕೊಳ್ಳಿ ಸಲಹೆ ನೀಡಿದರು.

ರೈತ ಮುಖಂಡ ಶಿವಶಂಕರ ವಿ.ಎಸ್ ಮಾತನಾಡಿ, ಭಾರತವು ಆಹಾರ ಭದ್ರತೆಯಲ್ಲಿ ಎರಡನೇ ಸ್ಥಾನದಲ್ಲಿದೆ. ಕೃಷಿ ಉತ್ಪನ್ನಗಳ ಖರೀದಿಗೆ ಬಹರಾಷ್ಟ್ರೀಯ ಕಂಪನಿಗಳು ಏಕಸ್ವಾಮ್ಯದಿಂದಾಗಿ ರೈತ ವಂಚಿತನಾಗುತ್ತಿದ್ದಾನೆ. ವಿಶ್ವವಿದ್ಯಾಲಯಗಳು ರೈತರಿಗೆ ಬೆಂಬಲವಾಗಿರಬೇಕು ಎಂದು ಅಭಿಪ್ರಾಯ ಪಟ್ಟರು.

ಕಾರ್ಯಕ್ರಮ ಸಂಯೋಜಕರಾದ ಪ್ರೊ. ಎನ್.ಶಾಂತನಾಯ್ಕ, ಕನ್ನಡ ಅಧ್ಯಯನ ವಿಭಾಗ ಮುಖ್ಯಸ್ಥ ಪ್ರೊ.ರಾಬರ್ಟ್ ಜೋಸ್, ಜಂಗ್ಲಿಸಾಬ್, ದರೂರ ಪುರುಷೋತ್ತಮ ರೆಡ್ಡಿ, ವೆಂಕಟೇಶ್, ಇಂಗ್ಲೀಷ್ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ವಾತ್ಸಲ್ಯ, ನಾಟಕ ವಿಭಾಗದ ಅತಿಥಿ ಉಪನ್ಯಾಸಕರುಗಳಾದ ಡಾ.ಅಣ್ಣಾಜಿ ಕೃಷ್ಣರೆಡ್ಡಿ, ಸಹನಾ ಪಿಂಜಾರ, ಹೇಮೇಶ್ವರ.ಕೆ ಹಾಗೂ ವಿವಿಧ ನಿಕಾಯಗಳ ಡೀನರು, ವಿವಿಧ ವಿಭಾಗಗಳ ಮುಖ್ಯಸ್ಥರು, ಸಂಯೋಜಕರು, ಬೋಧಕರು, ಸಂಶೋಧನಾ ವಿದ್ಯಾರ್ಥಿಗಳು, ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು, ರೈತರು ಉಪಸ್ಥಿತರಿದ್ದರು.

ಪುರಾಣ–ಇತಿಹಾಸ–ಸಂಸ್ಕೃತಿಗಳ ಸಂಗಮ ಪಂಪ–ವಿರೂಪಾಕ್ಷ ರಥೋತ್ಸವ



ಹಂಪಿಯ ಸಂದರ್ಭದಲ್ಲಿ ಧಾರ್ಮಿಕ ಸಾಂಸ್ಕೃತಿಕ ಹಬ್ಬ ಆಚರಣೆ ಉತ್ಸವಗಳಿಗೆ ಬಹುಮುಖಿ ಆಯಾಮಗಳಿವೆ. ಇಲ್ಲಿಯ ಹಬ್ಬ ಆಚರಣೆ ರಥೋತ್ಸವ ಧಾರ್ಮಿಕವಾಗಿ ಅಷ್ಟೇ ಅಲ್ಲ ಚಾರಿತ್ರಿಕವಾಗಿಯೂ ಮಹತ್ವವನ್ನು ಪಡೆದುಕೊಂಡಿವೆ. ವಿಶೇಷವಾಗಿ ಹಂಪಿಯ ಅಧಿದೈವ ಪಂಪ ವಿರೂಪಾಕ್ಷ ರಥೋತ್ಸವ ಪೌರಾಣಿಕವಾಗಿ ಹಾಗೂ ಚಾರಿತ್ರಿಕವಾಗಿ ಅಂದಿನಿಂದ ಇಂದಿನವರೆಗೂ ಅದೇ ಧಾರ್ಮಿಕ ಸಾಂಸ್ಕೃತಿಕ ಪರಂಪರೆಯಲ್ಲಿ ನಡೆದುಕೊಂಡು ಬರುತ್ತಿದೆ.

ವಿಜಯನಗರದ ಅರಸರ ಕಾಲದಲ್ಲಿ ಅತ್ಯಂತ ವೈಭವೋಪೇತವಾಗಿ ಪಂಪ ವಿರೂಪಾಕ್ಷ ರಥೋತ್ಸವ ನಡೆದ ಬಗ್ಗೆ ವಿದೇಶಿ ಪ್ರವಾಸಿಗರು ದಾಖಲಿಸಿದ್ದಾರೆ. ಇಷ್ಟೇ ಅಲ್ಲ ಹಂಪಿಯ ಅಹೋಬಲ ಕವಿ ವಿರೂಪಾಕ್ಷ ವಸಂತೋತ್ಸವ ಚಂಪೂವಿನಲ್ಲಿ ವಿರೂಪಾಕ್ಷನ ರಥೋತ್ಸವದ ದಿನ ಬೆಳಗಿನಿಂದ ಸಂಜೆಯವರೆಗೆ ರಥೋತ್ಸವದ ಕಾರ್ಯಗಳನ್ನು ವಿಕ್ಷಕ ವಿವರಣೆಯಂತೆ ಕಟ್ಟಿ ಕೊಟ್ಟಿದ್ದಾನೆ. ಹೀಗಾಗಿ ಸುಮಾರು 650 ವರ್ಷಗಳ ಹಿಂದೆಯೇ ಈ ರಥೋತ್ಸವ ಅತ್ಯಂತ ಭಕ್ತಿ, ಸಡಗರದಿಂದ ವಿದ್ಯಾರಣ್ಯರು, ರಾಜರ ನೇತೃತ್ವದಲ್ಲಿ ಅಚರಿಸಲ್ಪಟ್ಟಿದೆ. ಅಂದು ವಿರೂಪಾಕ್ಷನ ರಥೋತ್ಸವ ದೈವೋತ್ಸವ ಹಾಗೂ ಜನೋತ್ಸವವೂ ಆಗಿ ನಡೆದಿರುವುದು ವಸಂತೋತ್ಸವ ಚಂಪೂವಿನ ಕೃತಿಯಿಂದ ತಿಳಿದು ಬರುತ್ತದೆ. ಇದೇ 23 ರಂದು ಹಂಪಿ ಹುಣ್ಣಿಮೆಯ ದಿವಸ ಪಂಪಾವಿರೂಪಾಕ್ಷನ ರಥೋತ್ಸವ ನಡೆಯಲಿದೆ. ಈ ಹಿನ್ನಲೆಯಲ್ಲಿ ಹಂಪಿ ರಥೋತ್ಸವದ ಕುರಿತು ಒಂದು ಚಿತ್ರಣ

ಪುಟ 2ರಲ್ಲಿ

ಸುದ್ದಿ, ಜಾಹೀರಾತು ಕಚೇರಿ

ವಿಜಯನಗರ ಜಿಲ್ಲೆಯ ಸಾರ್ವಜನಿಕ ಸುದ್ದಿ ಪ್ರಕಟಣೆಗಳ ಮಾಹಿತಿ ಪ್ರತಿಗಳನ್ನು ನೇರವಾಗಿ ಈ ಕೆಳಗಿನ ಕಚೇರಿ ವಿಳಾಸಕ್ಕೆ ತಲುಪಿಸಲು ಕೋರಿದೆ.

ಹಂಪಿ ಟೈಮ್ಸ್
ಬಂಬೂ ಬಜಾರ್, ವಾಲ್ಮೀಕಿ ಸರ್ಕಲ್ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಮೊ: 94486 33038
Email: hampitimes@gmail.com

ಭೂ ಒಡೆತನ ಯೋಜನೆಯಡಿ ಜೇಷ್ಠತಾ ಪಟ್ಟಿ ಪ್ರಕಟ; ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸಿ

ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲೆಯ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಡಿ ಬರುವ ಕರ್ನಾಟಕ ಆದಿ ಜಾಂಬವ ಅಭಿವೃದ್ಧಿ ನಿಗಮ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮಗಳಲ್ಲಿ ಭೂ ಒಡೆತನ ಯೋಜನೆಯಡಿ ಭೂ ಒಡೆತನದ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿದ್ದು, ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸಬಹುದು ಎಂದು ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.

ಜೇಷ್ಠತಾ ಪಟ್ಟಿಯನ್ನು ಅಂತರ್ಜಾಲ www.ballari.nic.in ನಲ್ಲಿ ಮತ್ತು ಜಿಲ್ಲಾ ಕಚೇರಿಯ ಸೂಚನಾ ಫಲಕದಲ್ಲಿಯೂ ಅಳವಡಿಸಲಾಗಿದೆ. ಆಕ್ಷೇಪಣೆಗಳಿರುವ ಭೂ ಮಾಲೀಕರು 07 ದಿನಗಳೊಳಗಾಗಿ ಈ ಕಚೇರಿಗೆ ಸಲ್ಲಿಸಬಹುದು ಎಂದು ಡಾ.ಬಿ.ಆರ್.ಅಂಬೇಡ್ಕರ್ ನಿಗಮದ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.

ರೈಲ್ವೆ ನಿಲ್ದಾಣದಲ್ಲಿ ಮಹಿಳೆ ಕಾಣೆ: ಪ್ರಕರಣ ದಾಖಲು

ಹಂಪಿ ಟೈಮ್ಸ್ ಹೊಸಪೇಟೆ



ಸುಲ್ತಾನಪುರದ ವಂಧನಾ ಕರೋಶಿಯಾ ಎಂಬುವರು ಬಳ್ಳಾರಿ ರೈಲ್ವೆ ನಿಲ್ದಾಣದಲ್ಲಿ ಏ.15ರಂದು ಕಾಣೆಯಾದ ಬಗ್ಗೆ ಬಳ್ಳಾರಿ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಂಧನಾ ಕರೋಶಿಯಾ ಅವರ ವಯಸ್ಸು 27, ಎತ್ತರ 5.4, ಇದ್ದು, ಹಿಂದಿ ಭಾಷೆ ಮಾತನಾಡುತ್ತಾರೆ. ವಂಧನಾ ಅವರ ಪತಿ ಏ.18 ರಂದು ಬಳ್ಳಾರಿ ರೈಲ್ವೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾನೆ.

ಈ ಮಹಿಳೆಯ ಬಗ್ಗೆ ಮಾಹಿತಿ ಕಂಡುಬಂದಲ್ಲಿ ಬಳ್ಳಾರಿ ರೈಲ್ವೆ ಪೊಲೀಸ್ ಠಾಣೆ ದೂ:08392–276063 ಮೊ:9480802131, ಇ–ಮೇಲ್:bellaryrly@ksp.gov.in ಅಥವಾ ಬೆಂಗಳೂರು ರೈಲ್ವೆ ಕಂಟ್ರೋಲ್ ರೂಂ ಇ–ಮೇಲ್: dcrly@ksp.gov.in ಗೆ ಮಾಹಿತಿ ನೀಡುವಂತೆ ಬಳ್ಳಾರಿ ರೈಲ್ವೆ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ತಿಳಿಸಿದ್ದಾರೆ.

ಏ.22 ಕಂಪ್ಲಿಯಲ್ಲಿ ನೇಹಾ ಹತ್ಯೆ ಖಂಡಿಸಿ ಪ್ರತಿಭಟನೆ

■ ಹಂಪಿ ಟೈಮ್ಸ್ ಕಂಪ್ಲಿ

ವಿದ್ಯಾರ್ಥಿನಿ ನೇಹಾ ಹಿರೇಮಠ ಹತ್ಯೆ ಖಂಡಿಸಿ ಏ.22 ರಂದು ಬೆಳಿಗ್ಗೆ 10ಕ್ಕೆ ಉದ್ಭವ ಮಹಾಗಣಪತಿ ದೇವಸ್ಥಾನದಿಂದ ಅಂಬೇಡ್ಕರ್ ವೃತ್ತದವರೆಗೆ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ವೀರಶೈವ ಸಂಘದ ತಾಲೂಕು ಅಧ್ಯಕ್ಷ ಪಿ.ಮೂಕಯ್ಯಸ್ವಾಮಿ ಹೇಳಿದರು.

ಇಲ್ಲಿನ ವೀರಶೈವ ಸಂಘದ ಆವರಣದಲ್ಲಿ ಶನಿವಾರ ಸಂಜೆ ಪೂರ್ವಭಾವಿ ಸಭೆ ಅಧ್ಯಕ್ಷತೆವಹಿಸಿ ಮಾತನಾಡಿದರು.

ನೇಹಾ ಹಿರೇಮಠ ಹತ್ಯೆ ತೀವ್ರ ಖಂಡನೀಯವಾಗಿದೆ. ತಾಲೂಕಿನ ಸರ್ವ ಧರ್ಮಗಳ ಸಮುದಾಯದವರು, ಪ್ರಗತಿಪರ ಸಂಘಟನೆಗಳ ಪದಾಧಿಕಾರಿಗಳು, ನಾಗರಿಕರು, ಚಿಂತಕರು ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಗಳನ್ನು ಕಳೆದುಕೊಂಡ ಕುಟುಂಬಕ್ಕೆ ನ್ಯಾಯಕ್ಕಾಗಿ ಕೈಜೋಡಿಸಿಬೇಕು ಎಂದು ಕೋರಿದ ಅವರು, ಪ್ರತಿಭಟನಾ ಪಾದಯಾತ್ರೆ ಮೂಲಕ ತೆರಳಿ ತಹಸೀಲ್ದಾರರಿಗೆ ಮನವಿ ಸಲ್ಲಿಸಲಾಗುವುದು ಎಂದರು.

ಪೂರ್ವಭಾವಿ ಸಭೆಯಲ್ಲಿ ವೀರಶೈವ ಸಮಾಜದ ಮುಖಂಡರಾದ ಅರವಿ ಬಸವನಗೌಡ, ಕೆ.ಎಂ.ಹೇಮಯ್ಯಸ್ವಾಮಿ, ವಾಲಿ ಕೊಟ್ರಪ್ಪ, ಎಸ್.ಎಂ.ನಾಗರಾಜ, ವಿ.ವಿದ್ಯಾಧರ, ಎಚ್.ನಾಗರಾಜ, ಕೆ.ಎಂ. ವಾಗೀಶ್ ಪಂಡಿತಾರಾಧ್ಯ, ಎನ್. ಎಂ.ಪತ್ರೆಯ್ಯಸ್ವಾಮಿ, ಎಸ್.ಡಿ.ಬಸವರಾಜ, ಟಿ.ಎಚ್.ಎಂ.ರಾಜಕುಮಾರ್, ಸಜ್ಜೇದ ವೀರಭದ್ರಪ್ಪ, ವಸ್ತ್ರದ ಜಡೆಯ್ಯಸ್ವಾಮಿ, ಬಿ.ಎಚ್.ಎಂ.ಅಮರನಾಥಶಾಸ್ತ್ರಿ, ಶಿವಾನಂದ, ಅರವಿ ಅಮರೇಶ, ಸಂತೋಷ್ ಸೋಗಿ ಇತರರಿದ್ದರು.

ಗುಳಿಗಿ ವೀರೇಂದ್ರ ಬಿಜೆಪಿ ರಾಜ್ಯ ಸಮಿತಿಯ ಸದಸ್ಯರಾಗಿ ನೇಮಕ

ನಾಲ್ಕು ಜಿಲ್ಲೆ ಜಿಲ್ಲಾಧ್ಯಕ್ಷರೊಂದಿಗೆ ಸಮನ್ವಯತೆ, ಸಂಘಟನೆಗೆ ಒತ್ತು: ವೀರೇಂದ್ರ

■ ಹಂಪಿ ಟೈಮ್ಸ್ ಕೂಡ್ಲಿಗಿ

ಭಾರತೀಯ ಜನತಾ ಪಾರ್ಟಿಯ ವೃತ್ತಿಪರರ ಪ್ರಕೋಷ್ಠದ ರಾಜ್ಯ ಸಮಿತಿಯ ಸದಸ್ಯರನ್ನಾಗಿ ಪಟ್ಟಣದ ಗುಳಿಗೆ ವೀರೇಂದ್ರ ಕುಮಾರ್ ಅವರನ್ನು ನೇಮಕ ಮಾಡಲಾಗಿದೆ.

ಭಾರತೀಯ ಜನತಾ ಪಾರ್ಟಿಯ ವೃತ್ತಿಪರರ ಪ್ರಕೋಷ್ಠದ ರಾಜ್ಯ ಸಂಚಾಲಕ ಕಿರಣ್ ಕುಮಾರ್ ಈ ಕುರಿತು ಆದೇಶ ಪತ್ರ ನೀಡಿದ್ದು, ಈ ಹೊಣೆಗಾರಿಕೆಯನ್ನು ಅತ್ಯಂತ ಜವಾಬ್ದಾರಿಯುವವಾಗಿ ನಿರ್ವಹಿಸುತ್ತಾ, ಪಕ್ಷ ಸಂಘಟನೆಯನ್ನು ತಳಮಟ್ಟದಲ್ಲಿ ಸದೃಢಗೊಳಿಸುತ್ತ, ಬರುವ ಎಲ್ಲಾ ಸವಾಲುಗಳನ್ನು ಎದುರಿಸಿ, ಪಕ್ಷಕ್ಕೆ ಶಕ್ತಿ ತುಂಬಿ, ಪಕ್ಷದ ವರ್ಚಸನ್ನು ಹೆಚ್ಚಿಸಬೇಕು ಎಂದು ತಿಳಿಸಿದ್ದಾರೆ. ಅಧಿಕಾರ ವಹಿಸಿಕೊಂಡು ಶನಿವಾರ ಸಂಜೆ ಪತ್ರಕರ್ತರೊಂದಿಗೆ ಮಾತನಾಡಿದ ಗುಳಿಗೆ ವೀರೇಂದ್ರ ಕುಮಾರ್, ನಾಲ್ಕು ಜಿಲ್ಲೆಗಳ ಜಿಲ್ಲಾಧ್ಯಕ್ಷರೊಂದಿಗೆ ಸಮನ್ವಯ ಸಾಧಿಸಿ ಪಕ್ಷದ ಸಂಘಟನೆಗೆ ಒತ್ತುನೀಡಿ, ಬೂತ್ ಮಟ್ಟದಲ್ಲಿ ಬಿಜೆಪಿ ಸಂಘಟಿಸಿ ಪಕ್ಷ ನೀಡಿದ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿ ಅಧಿಕಾರಕ್ಕೆ ತರುವ ಪ್ರಯತ್ನ ಮಾಡುವುದಾಗಿ ತಿಳಿಸಿದರು. ಮುಂಬರುವ ದಿನಗಳಲ್ಲಿ ಪಕ್ಷದ ಕಾರ್ಯಕ್ರಮವನ್ನು ಮುಂಚೂಣಿ ನಾಯಕರೊಂದಿಗೆ ಹಾಗೂ ಮಂಡಲದ ಅಧ್ಯಕ್ಷರೊಂದಿಗೆ ರೂಪುರೇಷೆಗಳ ಬಗ್ಗೆ ಚರ್ಚಿಸಿ ಚುನಾವಣೆಯಲ್ಲಿ ಬಿಜೆಪಿ ಪಕ್ಷವನ್ನು ಗೆಲ್ಲಿಸಲು ಪಣ ತೊಡುಗುವುದಾಗಿ ತಿಳಿಸಿದರು.

ವಿಜ್ಞಾನ

ನೀರಿಗೆ ಏಕೆ ಬಣ್ಣವಿಲ್ಲ?

■ ಆರ್.ಬಿ.ಗುರುಬಸವರಾಜ

ಕವಿತ ಮತ್ತು ಅಕ್ಷತ ಹೋಳಿ ಹಬ್ಬದಂದು ಬಣ್ಣ ಆಡಲು ತಯಾರಿ ಮಾಡಿದ್ದರು. ಬೇರೆ ಬೇರೆ ಬಣ್ಣದ ಪುಡಿಗಳನ್ನು ತಂದಿದ್ದರು. ಅವುಗಳನ್ನು ಬೇರೆ ಬೇರೆ ಬಾಟಲ್‌ಗಳಲ್ಲಿ ಸಂಗ್ರಹಿಸಿದ್ದರು. ಹೀಗೆ ಸಂಗ್ರಹಿಸುವಾಗ ಕವಿತಳ ಮನಸಿನಲ್ಲಿ ಒಂದು ಪ್ರಶ್ನೆ ಮೂಡಿತು. ಅದನ್ನು ಅಕ್ಷತಳಿಗೆ ಕೇಳಿದಳು. ಅವಳಿಗೂ ಅದರ ಬಗ್ಗೆ ಗೊತ್ತಿರಲಿಲ್ಲ. ಸ್ನೇಹಿತರೊಂದಿಗೆ ಬಣ್ಣ ಆಡಿ ಮನೆಗೆ ಬಂದರು. ಮನೆಗೆ ಬಂದ ನಂತರ ಕವಿತ ತಂದೆಯನ್ನು ಕೇಳಿದಳು. "ಅಪ್ಪ, ನೀರಿಗೆ ಸ್ವಂತ ಬಣ್ಣ ಇಲ್ಲವಾ? ಅದಕ್ಕೆ ಯಾವುದೇ ಬಣ್ಣ ಹಾಕಿದರೂ ಆ ಬಣ್ಣವನ್ನೇ ಪಡೆದುಕೊಳ್ಳುತ್ತದೆಯಲ್ಲಾ?" ಎಂದಳು. ತಂದೆ ಒಮ್ಮೆ ಮೆಲುವಾಗಿ ನಕ್ಕು ಅವಳ ಪ್ರಶ್ನೆಗೆ ಉತ್ತರಿಸತೊಡಗಿದರು.

ನೀರು ಒಂದು ಪಾರದರ್ಶಕ ವಸ್ತುವಾಗಿದ್ದು ಅದು ಬರಿಗಣ್ಣಿಗೆ ಬಣ್ಣರಹಿತವಾಗಿ ಕಾಣುತ್ತದೆ. ಇದಕ್ಕೆ ಕಾರಣವೇನೆಂದರೆ, ನೀರಿನ ಅಣುಗಳು ಗೋಚರ ಬೆಳಕಿನ ಯಾವುದೇ ನಿರ್ದಿಷ್ಟ ತರಂಗಾಂತರವನ್ನು ತನ್ಮೂಲಕ ಹರಿಯಲು ಬಿಡುತ್ತದೆ ಮತ್ತು ಪ್ರತಿಫಲಿಸುವುದಿಲ್ಲ. ಅದು ವಿಭಿನ್ನ ಬಣ್ಣವನ್ನು ನೀಡುತ್ತದೆ. ನೀರಿನ ಅಣುಗಳು ವಾಸ್ತವವಾಗಿ ಚಿಕ್ಕದಾಗಿರುತ್ತವೆ ಮತ್ತು ರಚನೆಯಲ್ಲಿ ಸರಳವಾಗಿರುತ್ತವೆ. ಬೆಳಕಿನ ಅಲೆಗಳು ಗಮನಾರ್ಹವಾಗಿ ಬದಲಾಗದೆ ನೀರಿನ ಮೂಲಕ ಹಾದುಹೋಗುತ್ತವೆ. ಇದರ ಪರಿಣಾಮವಾಗಿ ನೀರು ಪಾರದರ್ಶಕವಾಗಿ ಕಾಣಿಸಿಕೊಳ್ಳುತ್ತದೆ.

ನೀರಿನ ಅಣುಗಳು ಎರಡು ಹೈಡ್ರೋಜನ್ ಪರಮಾಣುಗಳು ಮತ್ತು ಒಂದು ಆಮ್ಲಜನಕ ಪರಮಾಣುವಿನಿಂದ ಮಾಡಲ್ಪಟ್ಟಿದೆ. ಈ ಅಣುಗಳು ಟೆಟ್ರಾಹೆಡ್ರಲ್ ರಚನೆಯಲ್ಲಿ ಜೋಡಿಸಲ್ಪಟ್ಟಿವೆ. ಈ ವ್ಯವಸ್ಥೆಯು ನೀರಿಗೆ ಸಮ್ಮಿತೀಯ ಆಕಾರವನ್ನು ನೀಡುತ್ತದೆ. ಅಂದರೆ ನೀರಿನ ಅಣುಗಳು ಯಾವುದೇ ಗಮನಾರ್ಹ ವಿದ್ಯುತ್ ದ್ವಿಧ್ರುವಿ ಕ್ಷಣವನ್ನು ಹೊಂದಿರುವುದಿಲ್ಲ. ಈ ಗುಣವು ಯಾವುದೇ ನಿರ್ದಿಷ್ಟ ತರಂಗಾಂತರವನ್ನು ಹೀರಿಕೊಳ್ಳದೆಯೇ ತನ್ಮೂಲಕ ಹರಿಯಲು ಬಿಟ್ಟು ಬೆಳಕು ಚಲಿಸಲು ಅನುಮತಿ ನೀಡುತ್ತದೆ.

ಶುದ್ಧ ನೀರಿಗೆ ಬಣ್ಣವಿಲ್ಲದಿದ

ಹಂಪಿ ಟೈಮ್ಸ್ ಸಂ|ಪಾ|ದ|ಕೀ|ಯ

ವಿಕೃತಿಗೆ ನೇಹಾ ಹಿರೇಮಠ ಬಲಿ ಹೊರಬರಬೇಕು ಕಟು ಸತ್ಯಗಳು

ನೂರಾರು ಕನಸು ಕಂಡಿದ್ದ ಜೀವವೊಂದು ದುಷ್ಟನ ಕ್ರೂರತನಕ್ಕೆ ಬಲಿಯಾಗಿದೆ. ಐಎಎಸ್ ಓದು ಉತ್ತಮ ಆಡಳಿತ ಕನಸು ಕಂಡಿದ್ದ ಯುವತಿಯ ಜೀವ ಅನ್ಯಾಯವಾಗಿ ಕಳೆದುಹೋಗಿದೆ. ಬೆಳಗಾವಿ ಮೂಲದ ಬುದ್ಧಿವಂತ ಯುವತಿಯನ್ನು ಹುಬ್ಬಳ್ಳಿ ನಗರದಲ್ಲಿ ಘೋರವಾಗಿ ಕೊಲೆ ಮಾಡಲಾಗಿದೆ. ಹುಬ್ಬಳ್ಳಿಯ ಪ್ರತಿಷ್ಠಿತ ಕಾಲೇಜಿನಲ್ಲಿ ಮೊದಲ ವರ್ಷದ ಎಂಸಿಎ ಓದುತ್ತಿದ್ದ ನೇಹಾ ಹಿರೇಮಠ ಹೆಸರಿನ ಯುವತಿ ಜೀವನದಲ್ಲಿ

ದೊಡ್ಡದೊಡ್ಡ ಕನಸುಗಳನ್ನು ಕಂಡು, ಅದರಂತೆ ವಿದ್ಯಾಭ್ಯಾಸ ಮಾಡುತ್ತಿದ್ದಳು. ಆದರೆ, ಕ್ರೂರಿ ಫಯಾಜ್ ಎಂಬಾತ ಆಕೆಯನ್ನು ಕೊಂದು ಹಾಕಿದ್ದಾನೆ. ಈ ಹಿಂದೆ ನೇಹಾ ಓದುತ್ತಿದ್ದ ಕಾಲೇಜಿನಲ್ಲಿ ನೇಹಾಳ ಕ್ಲಾಸ್‌ಮೇಟ್ ಆಗಿದ್ದ ಫಯಾಜ್ ಪ್ರೀತಿ ಹೆಸರಿನಲ್ಲಿ ಸಮಾಜ ತಲೆತಗ್ಗಿಸುವಂಥ ಕೆಲಸ ಮಾಡಿದ್ದಾನೆ. ತನ್ನ ಪ್ರೀತಿಯನ್ನು ನೇಹ ತಿರಸ್ಕರಿಸಿದ್ದಾಳೆ ಎಂಬ ಕಾರಣಕ್ಕೇ ಇಂಥ ದುಷ್ಕೃತ್ಯ ಎಸಗಿದ್ದಾನೆ. ಬಿಸಿಎಯಲ್ಲಿ ಫೇಲ್ ಆಗಿದ್ದ ಈತನೆಲ್ಲಿ ? ಐಎಎಸ್ ಆಗುವ ಕನಸು ಕಂಡು, ಅದರಂತೆ ಉತ್ತಮ ಶಿಕ್ಷಣ ಪಡೆಯುತ್ತಿದ್ದ ನೇಹಾ ಎಲ್ಲಿ ? ಈತನಲ್ಲಿರುವ ಇಂಥ ದುರ್ಗುಣ ನೋಡಿ ನೇಹಾ ಪ್ರೀತಿಸಬೇಕಿತ್ತೇ ? ಎಂಥ ದುರಂತ ನೋಡಿ, ನೇಹಾ ಓದುತ್ತಿದ್ದ ಕಾಲೇಜಿಗೆ ಬಂದಿದ್ದ ಫಯಾಜ್, ಅದೇ ಕ್ಯಾಂಪಸ್‌ನಲ್ಲಿಯೇ ನೇಹಾಳನ್ನು ಪ್ರೀತಿ ಕಾರಣಕ್ಕೆ ಕೊಂದು ಹಾಕುವ ಮೂಲಕ ಮೃಗತ್ವ ಪ್ರದರ್ಶಿಸಿದ್ದಾನೆ. ಈ ಘಟನೆಗೆ ಇಡೀ ರಾಜ್ಯವೇ ಬೆಚ್ಚಿಬಿದ್ದಿದೆ. ಕೊಲೆ ಮಾಡಿದ ರೀತಿಯೂ ಘೋರವಾಗಿದೆ. ಹಾಡುಹಗಲೇ ನೇಹಾಳನ್ನು ಒಂಬತ್ತು ಬಾರಿ ಚಾಕುವಿನಿಂದ ಇರಿದ ಈ ದುಷ್ಟ, ಆಕೆ ಸಾಯುವವರೆಗೂ ಅಲ್ಲೇ ಮಾನವೀಯತೆ ಮರೆತು ನಿಂತಿದ್ದಾನೆ. ಕೊನೆಗೆ ಈಕೆಯ ಜೀವ ಹೋಯಿತೆಂದು ಖಚಿತಪಡಿಸಿಕೊಂಡ ನಂತರವಷ್ಟೇ ಅಲ್ಲಿಂದ ಓಡಲು ಯತ್ನಿಸಿದ್ದಾನೆ. ನಿಜವಾಗಿಯೂ ಪ್ರೀತಿಯಿದ್ದರೆ ಕೊಲೆ ಮಾಡುತ್ತಿದ್ದನೇ ಫಯಾಜ್ ? ಆದರೆ, ಇದು ಪ್ರೀತಿಯಲ್ಲ, ಆತನ ಒಳಗಿರುವ ದುಷ್ಟತನ, ಕ್ರೌರ್ಯ, ವಿಕೃತಿ ಮನಸು ಅಲ್ಲದೆ ಬೇರೇನಿಲ್ಲ. ನೇಹಾ ಕೊಲೆ ಘಟನೆಗೆ ಇಡೀ ರಾಜ್ಯ ಬೆಚ್ಚಿಬಿದ್ದಿದ್ದು, ಸಮಾಜ ತಲೆತಗ್ಗಿಸುವಂತಾಗಿದೆ. ಕೊಲೆ ಘಟನೆ ಖಂಡಿಸಿ ಹಿಂದು ಪರ ಸಂಘಟನೆಗಳು ಪ್ರತಿಭಟನೆಗಳಿದಿವೆ. ರಾಜ್ಯಾದ್ಯಂತ ಮಠಾಧೀಶರೂ ಸೇರಿದಂತೆ ಎಬಿವಿಪಿ ಮತ್ತು ಸಮುದಾಯದ ಸಂಘಟನೆಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿವೆ. ಹುಡುಗಿಯ ಗ್ರಾಮ ಮುನವಳ್ಳಿಯಲ್ಲಿ ಮೂರ?ನಾಲ್ಕು ದಿನ ಬಂದ್‌ಗೆ ಕರೆ ನೀಡಲಾಗಿದೆ. ಹುಬ್ಬಳ್ಳಿಯಲ್ಲಿ ಭಾರತೀಯ ಜನತಾ ಪಾರ್ಟಿ ಮತ್ತು ಹಿಂದು ಪರ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸುವ ಮೂಲಕ ಪ್ರತಿಭಟನೆಗೆ ಇಳಿದಿದ್ದಾರೆ. ಬಿಜೆಪಿ ನಾಯಿಕರು ನೇಹಾ ಕುಟುಂಬವನ್ನು ಭೇಟಿ ಮಾಡಿ ಸಾಂತ್ವನ ಹೇಳುತ್ತಿದ್ದಾರೆ. ಅಚ್ಚರಿಯೆಂದರೆ ನೇಹಾಳ ತಂದೆ ಕಾಂಗ್ರೆಸ್‌ನಿಂದ ಕಾರ್ಪೊರೇಟರ್ ಆಗಿದ್ದಾರೆ. ಸಂಘಟನೆಗಳು, ಹಿಂದು ಪರ ಕಾರ್ಯಕರ್ತರು ಸೇರಿಕೊಂಡು ಆರೋಪಿಗೆ ಗಲ್ಲು ಶಿಕ್ಷೆ ಕೊಡಿಸುವಂತೆ ಕ್ರಮಕೈಗೊಳ್ಳಬೇಕೆಂದು ಸರ್ಕಾರದ ಮೇಲೆ ಒತ್ತಡ ಹೇರುತ್ತಿದ್ದಾರೆ. ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುವಂತೆ ಪೊಲೀಸ ಅಧಿಕಾರಿಗಳಿಗೆ ಸಿಎಂ ಸಿದ್ದರಾಮಯ್ಯ ಸೂಚಿಸಿದ್ದಾರೆ. ಬಿಜೆಪಿ ಈ ಘಟನೆಯನ್ನು ಚುನಾವಣಾ ರಾಜಕೀಯಕ್ಕೆ ಬಳಸಿಕೊಳ್ಳುತ್ತಿದೆ ಎಂದೆನಿಸಿದರೂ ಈ ಸಂದರ್ಭದಲ್ಲಿ ಆ ಕುಟುಂಬಕ್ಕೆ ಬೆನ್ನೆಲುಬು ಆಗಿರುವುದನ್ನು ಸ್ವಾಗತಿಸಬೇಕು. ಇಷ್ಟೆಲ್ಲ ಒತ್ತಡ ಇದ್ದರಷ್ಟೇ ಪೊಲೀಸರು ಮತ್ತು ಸರ್ಕಾರ ಸರಿಯಾಗಿ ಕೆಲಸ ಮಾಡಲು ಸಾಧ್ಯ. ಕೊಲೆ ಸಂಬಂಧ ತನಿಖೆ ತೀವ್ರಗೊಳಿಸಬೇಕಿದೆ. ಫಯಾಜ್ ಹಿಂದೆ ಮತಾಂಧತೆ ಇದೆಯೇ ? ಅಥವಾ ಇವನು ಮಾನಸಿಕ ಸ್ಥಿಮಿತಿ ಕಳೆದಕೊಂಡವನೇ ? ಅಥವಾ ಇವರ ಹಿಂದೆ ಯಾವುದಾದರೂ ಜಾಲವಿದೆಯೇ ? ಅಥವಾ ಲವ್ ಜಿಹಾದ್ ಆಗಿದೆಯೇ ?... ಇವೆಲ್ಲ ನಿಷ್ಪಕ್ಷಪಾತವಾಗಿ ತನಿಖೆ ನಡೆಸಿದರಷ್ಟೇ ವಿಷಯಗಳು ಹೊರಬರುತ್ತವೆ.

ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಬೆಳಕಿನ ಹಾದಿ: ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊದ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ. ಇ-ಮೇಲ್:hampitimes@gmail.com
M: 9448633038

ಜಾಹೀರಾತಿಗಾಗಿ ಸಂಪರ್ಕಿಸಿ:
Contact for EVENT COVERAGE & Advertisements in Leading News Paper
9448633038

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

ಪುರಾಣ–ಇತಿಹಾಸ–ಸಂಸ್ಕೃತಿಗಳ ಸಂಗಮ

ಪಂಪಾ–ವಿರೂಪಾಕ್ಷ ರಥೋತ್ಸವ

ಹಂಪಿಯ ಸಂದರ್ಭದಲ್ಲಿ ಧಾರ್ಮಿಕ ಸಾಂಸ್ಕೃತಿಕ ಹಬ್ಬ ಆಚರಣೆ ಉತ್ಸವಗಳಿಗೆ ಬಹುಮುಖಿ ಆಯಾಮಗಳಿವೆ. ಇಲ್ಲಿಯ ಹಬ್ಬ ಆಚರಣೆ ರಥೋತ್ಸವ ಧಾರ್ಮಿಕವಾಗಿ ಅಷ್ಟೇ ಅಲ್ಲ ಚಾರಿತ್ರಿಕವಾಗಿಯೂ ಮಹತ್ವವನ್ನು ಪಡೆದುಕೊಂಡಿವೆ. ವಿಶೇಷವಾಗಿ ಹಂಪಿಯ ಅಧಿದೈವ ಪಂಪ ವಿರೂಪಾಕ್ಷ ರಥೋತ್ಸವ ಪೌರಾಣಿಕವಾಗಿ ಹಾಗೂ ಚಾರಿತ್ರಿಕ ವಾಗಿ ಅಂದಿನಿಂದ ಇಂದಿನವರೆಗೂ ಅದೇ ಧಾರ್ಮಿಕ ಸಾಂಸ್ಕೃತಿಕ ಪರಂಪರೆಯಲ್ಲಿ ನಡೆದುಕೊಂಡು ಬರುತ್ತಿದೆ.

ವಿಜಯನಗರದ ಅರಸರ ಕಾಲದಲ್ಲಿ ಅತ್ಯಂತ ವೈಭವೋಪೇತವಾಗಿ ಪಂಪ ವಿರೂಪಾಕ್ಷ ರಥೋತ್ಸವ ನಡೆದ ಬಗ್ಗೆ ವಿದೇಶಿ ಪ್ರವಾಸಿಗರು ದಾಖಲಿಸಿದ್ದಾರೆ. ಇಷ್ಟೇ ಅಲ್ಲ ಹಂಪಿಯ ಅಹೋಬಲ ಕವಿ ವಿರೂಪಾಕ್ಷ ವಸಂತೋತ್ಸವ ಚಂಪೂವಿನಲ್ಲಿ ವಿರೂಪಾಕ್ಷನ ರಥೋತ್ಸವದ ದಿನ ಬೆಳಗಿನಿಂದ ಸಂಜೆಯವರೆಗೆ ರಥೋತ್ಸವದ ಕಾರ್ಯಗಳನ್ನು ವಿಕ್ಷಕ ವಿವರಣೆಯಂತೆ ಕಟ್ಟಿ ಕೊಟ್ಟಿದ್ದಾನೆ. ಹೀಗಾಗಿ ಸುಮಾರು 650 ವರ್ಷಗಳ ಹಿಂದೆಯೇ ಈ ರಥೋತ್ಸವ ಅತ್ಯಂತ ಭಕ್ತಿ, ಸಡಗರದಿಂದ ವಿದ್ಯಾರಣ್ಯರು, ರಾಜರ ನೇತೃತ್ವದಲ್ಲಿ ಅಚರಿಸಲ್ಪಟ್ಟಿದೆ. ಅಂದು ವಿರೂಪಾಕ್ಷನ ರಥೋತ್ಸವ ದೈವೋತ್ಸವ ಹಾಗೂ ಜನೋತ್ಸವವೂ ಆಗಿ ನಡೆದಿರುವುದು ವಸಂತೋತ್ಸವ ಚಂಪೂವಿನ ಕೃತಿಯಿಂದ ತಿಳಿದು ಬರುತ್ತದೆ. ಇದೇ 23 ರಂದು ಹಂಪಿ ಹುಣ್ಣಿಮೆಯ ದಿವಸ ಪಂಪಾವಿರೂಪಾಕ್ಷನ ರಥೋತ್ಸವ ನಡೆಯಲಿದೆ. ಈ ಹಿನ್ನಲೆಯಲ್ಲಿ ಹಂಪಿ ರಥೋತ್ಸವದ ಕುರಿತು ಒಂದು ಚಿತ್ರಣ.

ಪೌರಾಣಿಕವಾಗಿ ಚಾರಿತ್ರಿಕವಾಗಿ ಮತ್ತು ಸಾಂಸ್ಕೃತಿಕವಾಗಿ ನಡೆದು ಬಂದಿರುವ ಕನ್ನಡ ನಾಡಿನ ಅತಿ ಪ್ರಾಚೀನ ಶಿವ ಪರಂಪರೆಯ ನೆಲ ಹಂಪಿ. ಪಾರ್ವತಿ ಶಿವನನ್ನು ಪಡೆಯಲು ತಪಸ್ಸು ಮಾಡಿದಾಗ ಹೇಮಕೂಟದಲ್ಲಿ ಶಿವ ಪ್ರತ್ಯಕ್ಷನಾದ. ಪಾರ್ವತಿಯರ ಕಲ್ಯಾಣೋತ್ಸವ ನಡೆದಿದ್ದು ಇದೇ ಹೇಮಕೂಟದಲ್ಲಿ. ಹೀಗಾಗಿ ಶಿವಪ್ರಧಾನವಾದ ಕ್ಷೇತ್ರ. ಈ ಪಂಪಾ ಕ್ಷೇತ್ರವು ಕಾಶಿ ಕ್ಷೇತ್ರಕ್ಕೆ ಸಮಾನವಾಗಿದ್ದು ಕಾಶಿ ವಿಶ್ವೇಶ್ವರನೇ ಪಂಪಾಕ್ಷೇತ್ರದ ಶ್ರೀ ವಿರೂಪಾಕ್ಷ ನಾಗಿದ್ದು, ಇಲ್ಲಿ ಹರಿಯುತ್ತಿರುವ ತುಂಗಭದ್ರೆ ಗಂಗಾ ನದಿಗೆ ಸಮಾನವಾಗಿ ಹರಿಯುತ್ತಿದ್ದಾಳೆ ಎಂಬ ನಂಬಿಕೆಯಿಂದಲೇ ಪಂಪಾಕ್ಷೇತ್ರವನ್ನು ದಕ್ಷಿಣದ ಕಾಶಿ ಎಂದೇ ಜನರು ನಂಬಿಕೊಂಡು ಬರುತ್ತಿದ್ದಾರೆ. ವಿರೂಪಾಕ್ಷನೆ ಇಲ್ಲಿಯ ಅಧಿದೈವ ಮತ್ತು ಆರಾಧ್ಯ ದೈವ. ಹಂಪಿಯ ರಥೋತ್ಸವ ಎಂದರೆ ಪಂಪ ವಿರೂಪಾಕ್ಷ ರಥೋತ್ಸವ. ಶಿವ ಪಾರ್ವತಿಯರನ್ನು ಕೇಂದ್ರವಾಗಿರಿಸಿಕೊಂಡು ಈ ರಥೋತ್ಸವ ನಡೆಯುತ್ತದೆ. ಪಾರ್ವತಿಯನ್ನು ಪಂಪಾಂಬಿಕೆ ಎಂದು ಹಂಪಮ್ಮ ಎಂತಲೂ ಶಿವನನ್ನು ವಿರುಪಾಕ್ಷ ಪಂಪಾಪತಿ ಪಂಪಣ್ಣ ಮೊದಲಾದ ಹೆಸರುಗಳಿಂದಲೂ ಜನರು ಭಕ್ತಿ ಯಿಂದ ಕರೆದುಕೊಂಡು ಬಂದಿದ್ದಾರೆ.

ಎಂ.ಎಂ.ಶಿವಪ್ರಕಾಶ
ಲೇಖಕರು: ಹೊಸಪೇಟೆ
ಮೊ: 9449654489

Scan For Digital Colourful
HAMPI TIMES E-paper

ಬಹುತೇಕವಾಗಿ ಎಲ್ಲ ದೇವರುಗಳ ಜಾತ್ರೆಗಳು ವರ್ಷಕ್ಕೊಮ್ಮೆ ನಡೆಯುತ್ತವೆ. ಆದರೆ ಹಂಪಿಯ ಪಂಪ ವಿರೂಪಾಕ್ಷ ಜಾತ್ರೆಯು ವರ್ಷದಲ್ಲಿ ಎರಡು ಭಾಗಗಳಲ್ಲಿ ನಡೆಯುತ್ತಿರುವುದು ವಿಶೇಷವಾಗಿದೆ. ಫಲ ಪೂಜೆ ಮತ್ತು ರಥೋತ್ಸವ ಈ ಎರಡು ಸಂದರ್ಭಗಳಲ್ಲಿ ಭಕ್ತರು ಹಂಪಿಗೆ ಬಂದು ಈ ಧಾರ್ಮಿಕ ಕಾರ್ಯ ಕ್ರಮಗಳಲ್ಲಿ ಪಾಲ್ಗೊಳ್ಳುತ್ತಾರೆ. ಡಿಸೆಂಬರ್ ತಿಂಗಳಿನಲ್ಲಿ ನಡೆಯುವ ಫಲಪೂಜೆಯು ಪಂಪಾಂಬಿಕೆ ಹಾಗೂ ವಿರೂಪಾಕ್ಷನ ಮದುವೆಯ ಪೂರ್ವ ಭಾವಿಯಾಗಿ ಮದುವೆಯ ನಿಶ್ಚಿತಾರ್ಥ ಕಾರ್ಯ ನಡೆಯುತ್ತದೆ. ಹಂಪಿ ಹುಣ್ಣಿಮೆಯೆಂದು ಪಂಪಾ ವಿರೂಪಾಕ್ಷ ಮದುವೆಯ ಮೆರವಣಿಗೆಯ ಸಂಭ್ರಮ ಈ ರಥೋತ್ಸವದ ಮೂಲಕ ನಡೆಯುತ್ತದೆ. ಹೀಗೆ ಶತಶತಮಾನಗಳಿಂದ ಈ ಪಂಪಾ ವಿರೂಪಾಕ್ಷ ಧಾರ್ಮಿಕ ಆಚರಣೆಗಳು ಸಂಪ್ರದಾಯಗಳು ರಥೋತ್ಸವ ಇಂದಿಗೂ ನಡೆದುಕೊಂಡು ಬಂದಿವೆ.

ಪೌರಾಣಿಕವಾಗಿ ಪಂಪ ವಿರೂಪಾಕ್ಷ ಜಾತ್ರೆಯು ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದಿದೆ. ವಿಜಯನಗರ ಸಾಮ್ರಾಜ್ಯದ ಕಾಲಘಟ್ಟದಲ್ಲಿ ಪ್ರಮುಖವಾಗಿ ವಿರುಪಾಕ್ಷ ರಥೋತ್ಸವ ನಡೆಯುತ್ತಿದ್ದುದ್ದಕ್ಕೆ ದಾಖಲೆಗಳಿವೆ. ಬೆಳಗಿನಿಂದ ಸಂಜೆವರೆಗೂ ರಥೋತ್ಸವದ ಕಾರ್ಯಕ್ರಮಗಳು, ಪೂಜೆ ಹೋಮ ಹವನಗಳು ಹಂಪಿಯಲ್ಲಿ ನಡೆದಿದ್ದನ್ನು ಕಣ್ಣಾರೆ ಕಂಡಿದ್ದನ್ನು ಲೈವ್ ರೀತಿಯಲ್ಲಿ ದಾಖಲಿಸಿದ್ದಾನೆ ಅಹೋಬಲ ತನ್ನ ವಿರೂಪಾಕ್ಷ ವಸಂತೋತ್ಸವ ಚಂಪೂ ಕೃತಿಯಲ್ಲಿ. ಸಂಸ್ಕೃತದಲ್ಲಿರುವ ಈ ಕೃತಿಯನ್ನು ಕನ್ನಡಕ್ಕೆ ಪ್ರೊಫೆಸರ್ ಕೆ.ಎಸ್. ಕಣ್ಣನ್ ಅನುವಾದ ಮಾಡಿದ್ದಾರೆ. ಈ ಕೃತಿಯಲ್ಲಿರುವ ರಥೋತ್ಸವದ ವಿವರಣೆಯ ಕೆಲ ಸಂದರ್ಭಗಳನ್ನು ಯಥಾವತ್ತಾಗಿ ಇಲ್ಲಿ ಓದುಗರಿಗಾಗಿ ನೀಡಲಾಗಿದೆ.

ಅರ್ಪಣೆ ಪ್ರಸಾದ

ಅಧಿಕಾರಿ ಪುರುಷರೇ ಮೊದಲಾಗಿ ಅಧಿಕಾರಿ ಹಲವು ಭಕ್ತರು ಸದಾ ತರುತ್ತಲೇ ಇದ್ದ ಹಣ್ಣುಗಳನ್ನು ಶಿವಾರ್ಚಕನು ನಿಂತುಕೊಂಡೆ ಶಿವ ಪಾರ್ವತಿಯರಿಗೆ ಸಮರ್ಪಿಸಿ ಅವನೇ ಎಲ್ಲ ಪ್ರಸಾದ ಪುಷ್ಪಗಳನ್ನು ಅವರುಗಳ ಕೈಯಲ್ಲಿ ಕೊಟ್ಟನು. ಆ ಬಳಿಕ ಆತನ ಅನುಮತಿಯಂತೆ ಶೈವರು ತ್ರಿಕೂಟ ಪೀಠವನ್ನು ಭೂಮಿಯ ಮೇಲೆ ಇಳಿಸಿದರು. ಶ್ರೀ ಶಾಂಭಶಂಕರ ಹಾಗೂ ಸದಾಶಿವರ ಭವ್ಯಮೂರ್ತಿಗಳಿಗೆ ಕೂಡಲೇ ಪೂಜೆಯನ್ನು ಮಾಡಿ ಬೆಲ್ಲದ ನೀರಿನೊಂದಿಗೆನ ಕಡಲೆ ಮುಂತಾದ ಪ್ರಸಾದವನ್ನು ಆ ದೇವರ್ಕನ್ನು ಮತ್ತೆ ವಿಪ್ರರುಂದಕ್ಕೆ ದಾನವಾಗಿ ಕೊಟ್ಟನು.

ಮೂರ್ತಿಗಳು ರಥಗಳು

ಆಬಳಿಕ ದೇವರ್ತಕನು ಶಿವಮೂರ್ತಿಗಳೆರಡನ್ನು ಮಹಾರಥಕ್ಕೆ ಏರಿಸಿದನು. ಅದು ಹೀಗೆ ಅವನ್ನು ತಮಾಸಿಕ ಫಲದೊಂದಿಗೆ ತ್ರಿಕೂಟ ಪೀಠದಿಂದ ಎತ್ತಿ ತನ್ನವನೇ ಆದ ಒಬ್ಬ ಮಹಾಬಲಶಾಲಿ ಯುವಕನೊಬ್ಬನೆಂದು ಹೊರಿಸಿ ತನಗೂ ಅದರ ಸಂಬಂಧದ ಲಾಭವುಂಟಾಗಲಿ ಎಂಬುದಕೊಸ್ಕರವೇ ಎಂಬಂತೆ, ಹಗ್ಗ ಹಿಡಿದು ಹತ್ತಿದನ ಮುಕ್ತಿಯನ್ನುಂಟು ಮಾಡುತ್ತಕ್ಕ ಸ್ವಹಸ್ತದಲ್ಲಿದ್ದ ನಿರಂತರ ಬ್ರಹ್ಮಾನು ಸಂಧಾನದ ಸೂತ್ರವನ್ನು ಸಾಕ್ಷಾತ್ ಆಗಿ ಪ್ರದರ್ಶಿತ ಎಂಬಂತೆ ಅಂಗೈಯಲ್ಲಿ ಹಿಡಿದಿರುವ ಮಹಾದೇವನಹಳ್ಳಿಯ ಭಕ್ತಿ ಎಂಬ ಹಗ್ಗಗಳಿಂದಲೇ ವೇದಗಳೆಂಬ ವಿಶ್ವಗಳಿಂದ ಕೂಡಿದ ಬ್ರಹ್ಮವೆಂಬ ರಥದ ಆರೋಹಣವನ್ನು ಮಾಡಬೇಕು ಎಂಬಂತೆ ಪರಮಪುರುಷಾರ್ಥವನ್ನು ಸಾಧಿಸತಕ್ಕವರಿಗೆ ಸಂಸಾರದ ಹಗ್ಗವನ್ನು ಹಿಡಿದಿದ್ದರು ಗೌರಿ ಪತಿಯ ಪಾದ ಪದ್ಮ ದ್ವಂದ್ವವೇ ಲಕ್ಷ್ಯ – ಎಂಬಂತೆ ಮಹಾ ಯೋಗಿಶ್ವರರಿಗೆ ಸಹ ದುರ್ಬಲನಾದ ಮಹೇಶ್ವರನು ಭಕ್ತಿ ಎಂಬ ಹಗ್ಗದಿಂದಲೇ ಸೆಳೆಯಲ್ಪಡಬೇಕು ಎಂದು ಸೂಚಿಸಲೋಎಂಬಂತೆ ತಾನು ಹತ್ತಲು ಬಿದ್ದು ಹೋಗುವ ಭಯದಿಂದ ಶಿವಪೀಠವನ್ನು ಅಲಂಬಿಸಿದ ದೀರ್ಘ ಸೂತ್ರವನ್ನು ಹಿಡಿದಿರುವ ಸಾರಥಿಯ ಹಾಗೆ ಮೊದಲು ಹತ್ತಿ, ದ್ವಾರದಲ್ಲಿ ನಿಂತು ಮೆಲ್ಲಮೆಲ್ಲಗಾಮುಗಳನ್ನು ಹಿಡಿದು ಎಳೆದವನಾಗಿ ಗಮನವಿಟ್ಟು ಮಹಾರಥವನ್ನು ಹತ್ತಿಸಿದನು. ಆ ಶಿವಮೂರ್ತಿಗಳೆರಡನ್ನು ಕರಕಮಲಗಳನ್ನು ಅಂಜಲಿ ಜೋಡಿಸಿಕೊಂಡು ಆಗ ಈ ಲೋಕವು ಜನರು ರಥದ ಮೇಲಿರುತ್ತಿದ್ದ ಪಂಪಾಪತಿಯನ್ನು ಕಂಡು ಹೀಗೆ ಹೇಳಿತು ಸ್ವಾಮಿಯೇ, (ನೀನೇ) ತಂದ ಜಗತ್ತಿನ ಒಡೆಯನೇ ವಿಪ್ರನನ್ನು ದೃಢವಾಗಿ ಹಿಡಿದುಕೊಂಡು ರಥವನ್ನು ಮೆಲ್ಲಗೆ ಹತ್ತಪ್ಪ ನಿಖಿಲ ಲೋಕದ ರಕ್ಷಣೆಗಾಗಿ. ಆ ಬಳಿಕ ಆತನ ತಂಡ ಶಿವಮೂರ್ತಿಗಳೆರಡನ್ನು ಅಲ್ಲಿಗೆ ತಂದನ್ ಹೊರಗೆ ಕೊಳ್ಳುವ ಮತ್ತೆ ಹಾಗೂ ಬಣ್ಣದ ಹಾಸುಗಳಿಂದ ರಮ್ಯವಾದ ಮತ್ತು ರಥದ ಮಧ್ಯದಲ್ಲಿ ನಿಲ್ಲಿಸಿದ್ದ ಮಣಿ ಪೀಠದಲ್ಲಿ , (ಅವನ್ನು) ಇರಸಿದನು.

ವಿದ್ಯಾರಣ್ಯಾಗಮನ

ಆಗ ಹರ್ಮಸದೃಶವಾದ ಈ ರಥವನ್ನು ಬ್ರಾಹ್ಮಣರ ಗುರುವಾದ ವಿದ್ಯಾರಣ್ಯ ಎಂಬ ಹೆಸರಿನ ಶ್ರೇಷ್ಠ ಸನ್ಯಾಸಿಯು ಶಿಷ್ಯರೊಂದಿಗೆ ಹತ್ತಲಾಗಿ ಅತಿ ಬುದ್ಧಿಶಾಲಿಯಾದ ಈ ಬ್ರಾಹ್ಮಣನು ಮತ್ತೊಮ್ಮೆ ಪರಮಶಿವಮೂರ್ತಿಗಳಿಗೆ ಪೂಜೆಯನ್ನು ಮಾಡಿ ಕೈಯಲ

ಕವಿ ಮನಸು

ಮತ ನಾಡ ಹಿತಕೆ ಮತ

ಮತ ಸಹ ಮತ
ಸಮ್ಮತಿಯ ಮತ
ಚುನಾಯಿಸೋ ಮತ
ನಾಡ ಆಳೋಕೆ ಮತ

ಮತದಾನದ ಮತ
ಪ್ರಜಾ ಹಕ್ಕಿನ ಅಭಿಮತ
ಆಯ್ಕೆ ಹಕ್ಕಿನ ಪ್ರಜಾ ಮತ
ಸಮಬಾಳು ಸಮಪಾಲಿಗೆ
ನಾಡ ನಾಯಕಗೇ ಮತ

ಪ್ರಭುದ್ಧತೆಯ ಮತ
ನಾಡ ಪ್ರಭುದ್ಧಕೆ ಹಿತ
ಪ್ರಜಾ ಪ್ರಭುತ್ವ ಹಿತಕೆ ಮತ
ಪ್ರಜೆ ಪ್ರಜಾಳಿಕೆಗೆ ನಮ್ಮ ಮತ

ಮತದಾನದ ಅಮೂಲ್ಯ ಮತ ಸ್ವಾರ್ಥ
ಆಮೀಷಕಲ್ಲದ ಮತ
ನಿರ್ಭೀತಿ ನಿರಪೇಕ್ಷತೆಯ ಮತ
ಕಲ್ಯಾಣ ರಾಜ್ಯ ಸೌಖ್ಯಕೆ ಹಿತ

ನಾಡ ಪ್ರತಿ ವಯಸ್ಕ ಪ್ರಜೆಯ ಮತ
ಎಲ್ಲರೂ ನಾಡ ಹಿರಿಮೆ ಹಿತಕೆ ಮತ
ಮತದಾನ ಚಲಾಯಿಸಿ ಚುನಾಯಿಸಿ
ಪ್ರಭುದ್ಧರ
ಮಾಡಿರಿ ಪ್ರಜಾಪ್ರಭುತ್ವ ಸುಂದರ

– ಸೋ.ದಾ.ವಿರೂಪಾಕ್ಷ ಗೌಡ
ಹೊಸಪೇಟೆ

ಭೂಮಿ

ನಿಂತ ಜಾಗದಲ್ಲಿ ನಿಲ್ಲಳು ಈ ಇಳೆ
ಅದರಿಂದಲೆ ಹಗಲು ಇರುಳು ಎಂಬ ಕಳೆ.
ಅನುದಿನವು ಸೂರ್ಯೋದಯದ ಉಷೆ
ಬರೆಯುವುದು ಹೊಸ ಬದುಕಿನ
ಪರಿಭಾಷೆ.

ಸಕಲ ಜೀವರಾಶಿಗಳಿಗೆ ಇವಳೇ ನೆಲೆ
ಮಾತೃತ್ವಕ್ಕೆ ಭೂಮಿಯೇ ಸ್ಫೂರ್ತಿಯ ಸೆಲೆ.
ಇಳೆಯಲ್ಲಿ ಉಂಟು ಸುಡುವ ಬೆಂಕಿಯ
ಜ್ವಾಲೆ
ಇವಳಿಗೆ ಗೊತ್ತು ಮೋಡವನ್ನು
ಮಳೆಯಾಗಿಸುವ ಕಲೆ.

ಉಸಿರಾಡಲು ಗಾಳಿ, ಆಕಾಶವೆಂಬ
ಸೂರು,ತಿನ್ನಲು ಆಹಾರ
ಎಲ್ಲವನ್ನು ಕೊಟ್ಟ ಭೂಮಿಯನ್ನು
ಮಾಡುತ್ತಿದ್ದೇವೆ ಹಾಳು.
ಸಸ್ಯ ಗಿಡಗಳನ್ನು ನೆಟ್ಟು, ಬೆಳೆಸಿ
ಮಾಡಬೇಕು ಪರಿಹಾರ
ಇರುವುದೊಂದೇ ಭೂಮಿ
ಉಳಿಸಿಕೊಂಡರಷ್ಟೇ ಮುಂದಿನ ಬಾಳು.

– ಮಂಜುಶ್ರೀ ಮುರಳೀಧರ್.

ಪೊಲೀಸ್ ವೀಕ್ಷಕರ ಭೇಟಿಗೆ ಸ್ಥಳ ಬದಲಾವಣೆ

ಹಂಪಿ ಟೈಮ್ಸ್ ಬಳ್ಳಾರಿ:
09–ಬಳ್ಳಾರಿ (ಪ.ಪಂ) ಲೋಕಸಭಾ ಕ್ಷೇತ್ರ ಚುನಾವಣೆಗೆ ಪೊಲೀಸ್ ವೀಕ್ಷಕರಾಗಿ ಧರ್ಮೇಂದ್ರ ಸಿಂಗ್ ಭದೌರಿಯಾ (ಐಪಿಎಸ್) ಅವರ ಮೊ.9141086850 ಮತ್ತು ಲೈಜನಿಂಗ್ ಅಧಿಕಾರಿಯಾಗಿ ಡಿಎಆರ್ ನ ಆರ್‌ಎಸ್‌ಐ ಬಾಹುಬಲಿ ಅವರ ಮೊ.8660672173 ಇವರು ಜಿಲ್ಲೆಗೆ ಆಗಮಿಸಿದ್ದು, ಸಾರ್ವಜನಿಕರ ಭೇಟಿಗೆ ಸ್ಥಳವನ್ನು ಬದಲಾವಣೆ ಮಾಡಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ. ಪೊಲೀಸ್ ವೀಕ್ಷಕರ ಭೇಟಿಗೆ ನಗರದಲ್ಲಿರುವ ನೂತನ ಜಿಲ್ಲಾಡಳಿತ ಭವನದ ಕಚೇರಿಯ ಪಕ್ಕದ ಸರ್ಕಾರಿ ಅತಿಥಿ ಗೃಹ ಮಂದಿರದ ಕೆಳ ಮಹಡಿಯ ಕೊಠಡಿ ಸಂಖ್ಯೆ 03 ರಲ್ಲಿ ಮಧ್ಯಾಹ್ನ 03 ಗಂಟೆಯಿಂದ ಸಂಜೆ 05 ಗಂಟೆಯವರೆಗೆ ಭೇಟಿ ಮಾಡಬಹುದು. ಸಾರ್ವಜನಿಕರು, ಅಭ್ಯರ್ಥಿಗಳು, ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಲೋಕಸಭಾ ಚುನಾವಣೆಗೆ ಸಂಬಂಧಿಸಿದ ಅಹವಾಲು ಇದ್ದಲ್ಲಿ, ಸರ್ಕಾರಿ ಕೆಲಸದ (ಸಾರ್ವತ್ರಿಕ ರಜಾ ದಿನಗಳನ್ನು ಹೊರತುಪಡಿಸಿ) ದಿನಗಳಲ್ಲಿ ಮಾಹಿತಿಯನ್ನು ಸಲ್ಲಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

ಅಂತರ ಗಂಗೆ
(ಮುಗ್ಧ ಪ್ರೇಮಿಯ ಭಾವಾಂತರಂಗ)

ಕಥೆ : ಭಾಗ–2

ಆದರು ನೀನು ನನ್ನ ಆತ್ಮೀಯ ಹತ್ತಿರದ ನನ್ನ ಒಲವಿನ ನನ್ನಲ್ಲಿ ಮೊದಲ ಅನುರಾಗ, ಒಲವು, ಆಸೆಯನ್ನ ಒಟ್ಟೊಟ್ಟಿಗೆ ಏಕಕಾಲಕ್ಕೆ ಬಿತ್ತಿ, ಸಮೃಧ್ದ ಫಲ ಬರುವಂತೆ ಪೋಷಣೆಮಾಡಿ, ನನ್ನ ಗುರಿಗೆ ಮೈಲುಗಲ್ಲಾಗಿ ಪದೆ–ಪದೆ ನನ್ನನ್ನು ಎಚ್ಚರಿಸಿದ ಹುಡಿಗಿ ನೀನು, ನೂರಾರು ಅಲ್ಲಲ್ಲಾ ಸಾವೀರಾರು ಕೆಲಸದಲ್ಲಿ, ನೂರಾರು ಕನಸುಗಳಲ್ಲಿ ಭಾಗಿಯಾದವಳು ನೀನು, ಹತ್ತಾರು ಆಸೆಯನ್ನು ತುಂಬಿ ಹರೆಯದ ದಾರಿಯಲಿ ಜರಿಯಾಗಿ ಬಂದು ಮನೆ ಮಾಡಿದವಳು ನೀನು, ನನಗಷ್ಟೆ ಸಾಕು ಕೊಟ್ಟರೆ ಇನ್ನೂ ಬೇಕು, ಥ್ಯಾಂಕ್ಸ ಡಿಯರ್ ನೀನು ಈಗ ಕನಸಿನಲ್ಲೀಯೆ ಬಹಳ ಇಷ್ಟ ಆಗುತ್ತೀಯ ಆ ನನ್ನ ಸುಚಿ ಯಾವತ್ತು ನನ್ನಿಂದ ಕೊಸರುವುದಿಲ್ಲ, ಬೇಡ ಎಂದರು ದೂರ ಕೂರುವುದಿಲ್ಲ ಯಾವಗಲು ಮೈಗೆ ಮೈ ತಾಗಿ ಕೂಡುತ್ತಾಳೆ, ಬೇಡ ಅಂದರು ಕಣ್ಣು ಕುಕ್ಕುತ್ತಾಳೆ ಅಬ್ಬ ಅದೆಷ್ಟು ಬಿಗಿ ತಬ್ಬಿಕೊಳ್ಳುತ್ತಾಳೆ ಗೊತ್ತಾ ಉಸಿರು ನಿಂತ ಹಾಗೆ ಅನುಸುತ್ತೆ ನನಗೆ, ಬೆಳಕಾದರು ಹೋಗುವುದಿಲ್ಲ ನಾನೇನು ಕಮ್ಮಿಯಲ್ಲ ಅವಳು ನನ್ನ ಜೊತೆ ಇದ್ದಾಗ ನನ್ನ ತುಂಟತನಕ್ಕೆ ಮಿತಿಯೇ ಇಲ್ಲ ಏರಿದಷ್ಟು ಎತ್ತರ ಮುನ್ನುಗ್ಗಿದಷ್ಟು ಅಶ್ವಮೇದ ಯಾಗವೆ! ಅವಳಂತು ಎಂದೂ ಬತ್ತದ ಜೀವಾಮೃತ ನಾನಂತು ಎಂದೂ ನೀಗದ ದಾಹಿ!, ಅಯ್ಯೊ ಬಿಡು ಅವಳ ಕುರಿತು ಹೇಳುವುದು ಅಂದರೆ ಬೇಡ ಬಿಡು ಅದು ನನ್ನ ಸ್ವಂತ ಯಾರು ನನ್ನಿಂದ ಅದನ್ನು ಕಿತ್ತುಕೊಳ್ಳಲು ಸಾಧ್ಯವಿಲ್ಲ ಆದರೆ ಒಂದು ಮಾತ್ರ ಸತ್ಯ ಅದೆಷ್ಟೊ ಹುಡಿಗಿಯರನ್ನು ಹತ್ತಿರದಿಂದ ನೋಡಿದ್ದೇನೆ ಅವರ ಸಹ ಸಂಗಡ ಕೆಲಸ ಮಾಡಿದ್ದೇನೆ ಅವರ ಚರ್ಮದ ಬಣ್ಣ ನೋಡಿದ್ದೆನೆ, ಮನಸ್ಸಿನ ಮಾತು ಕೇಳಿದ್ದೇನೆ ಹದ ಮೀರಿದ ತಿಕ್ಕಲುತನ ನೋಡಿದ್ದೇನೆ, ಹುಸಿ ಅಸಹಜ ಪ್ರಚೋದನೆಯನ್ನ ಅನುಬಹುಸಿದ್ದೇನೆ, ಅರೆ ಬೆತ್ತಲೆ ಮನಸ್ಸು ಕಂಡಿದ್ದೇನೆ, ಪ್ರೀತಿ ನೋಡಿದ್ದೇನೆ ಆದರೆ ಅವರಾರು ಕ್ರೀಯೆಟ್ ಮಾಡದಂತಹ ಒಂದು ವಿಶಿಷ್ಟ ಫೀಲನ್ನು ಕ್ರೀಯೆಟ್ ಮಾಡಿದಿಯಲ್ಲ ದಟ್ಸ ಗ್ರೇಟ್ವಾ ನನ್ನ ಹುಚ್ಚು ಬಯಕೆಗಳಿಗೆ ನೀನು ಏಣಿಯಾದೆ ಹಸಿ ಬಿಸಿ ಕನಸುಗಳಿಗೆ ಕಾರಣವಾದೆ, ಅವುಗಳಿಗೆ ಜೀವ ಕಳೆ ತುಂಬಿದೆ, ನನ್ನ ನಾನು ತಿಳಿಯುವಂತೆ ಮಾಡಿದೆ, "ಒಂದು ಹುಡುಗ ತನ್ನ ತಾನು ಪಾಸಿಟಿವ್ ಆಗಿ ನೋಡಿಕೊಳ್ಳುವುದನ್ನು ತನ್ನನ್ನು ಒಂದು ಹುಡಿಗಿ ಗಮನಿಸಿವುದು ಗೊತ್ತಾದ ಮೇಲೆಯೇ ಅಥಾವ ಅಂತದೆ ಒಂದು ಫೀಲ್ ಅವನಲ್ಲಿ ಬಂದಾಗ ಮಾತ್ರ". ಆ ಭಾವನೆಯನ್ನ ನನ್ನಲ್ಲಿ ಕ್ರೀಯೆಟ್ ಮಾಡಿದಿಯಲ್ಲ ಸಾಕು, "ನಿನ್ನ ಜೊತೆ ಮಾತಾಡಿದ ಸಾವಿರದಷ್ಟು ಹೆಚ್ಚು ಸಲ ನನ್ನೊಂದಿಗೆ ನಾನೆ ಮಾತನಾಡಿಕೊಳ್ಳುವಂತೆ ಮಾಡಿದ್ದೀಯ" ಅದು ತುಂಬಾ ಖುಷಿಯನ್ನು ನೀಡಿದೆ, ನೀನು ನನಗೆ ಸಿಗದೆ ಹೋಗಬಹುದು, ನಿನ್ನ ಸಹವಾಸದಿಂದ ನಾನು ದೂರವಾಗಬಹುದು ಆದರೆ ಆಡಿದ ಮಾತು ನೋಡಿದ ನೋಟ ಕಂಡ ಕನಸು ಅನುಭವಿಸಿದ ಯಾತನೆ ಕಲ್ಪಿಸಿಕೊಂಡ ಕಲ್ಪನೆ, ಕಟ್ಟಿಕೊಂಡ ಜೀವನ ಇದು ಸಾಕು, ಒಂದು ಹುಡಿಗಿಯಿಂದ ಇನ್ನೇನು ನಿರೀಕ್ಷೆ ಮಾಡ್ಲಿಕ್ಕೆ ಸಾದ್ಯ ಹೇಳು, ಸಾಕು ಅವಳಿಂದ ನಾನು ಹಾಳಾದೆ ಅನ್ನುವುದಕಂತ ಅವಳು ನನಗೆ ಮೋಸ ಮಾಡಿದಳು ಅನ್ನುವುದಕಿಂತ ಅವಳ ಸಹವಾಸದಲ್ಲಿದ್ದಾಗಿನ ಖುಷಿ, ಅದಮ್ಮ್ಯ ಜೀವನೋತ್ಸವ, ಪ್ರತಿ ಬೆಳಕು ನೀಡುತ್ತಿದ್ದ ವೀಶೇಷತೆಗೆ ಕಾರಣವಾದವಳನ್ನ, ಜೀವಿಸಲು ಒಂದು ಕಾರಣ ಕೊಟ್ಟವಳನ್ನ, ಜೀವಕ್ಕೆ ಒಂದು ಧನ್ಯತೆಯನ್ನ ನೀಡಿದ ಅವಳಿಗೆ ಒಂದು ಧನ್ಯವಾದ ಹೇಳುವುದರಲ್ಲಿ ಪರಮಾನಂದ ಕಾಣುವುದೆ ಸರಿಯನಿಸುತ್ತದೆ.

ನನಗೆ ಗೊತ್ತಿದೆ ನಿನ್ನಲ್ಲಿ ಸಹ ಇಂತಹ ಒಂದು ಭಾವನೆಯನ್ನ ಖಂಡಿತವಾಗಿ ಕ್ರಿಯೇಟ್ ಮಾಡಿದ್ದೇನೆ, ಯಾವೂದೋ ಒಂದು ಕ್ಷಣದಲ್ಲಿಯಾದರು ನನ್ನ ಸಕ್ಕೆ ಬೇಕೆನಿಸಿರುತ್ತದೆ, ನನ್ನ ಬಗ್ಗೆ ಏನೋ ಯೋಚನೆ ಮಾಡಿ ಹಾಗೆ ಸುಮ್ಮನೆ ನಿನ್ನೊಳಗೆ ನೀನೆ ನಸು ನಕ್ಕಿರಬಹುದು, ಅಟ್ ಲೀಸ್ಟ್ ಅವನೊಂದಿಗೆ ನಾನು ಇದ್ದರೆ! ನನ್ನನ್ನ ಸರಿಯಾಗಿ ನೋಡಿಕೊಳ್ಳಬಹುದೆ? ಎನ್ನುವ ಅನುಮಾನದಲ್ಲಾದರು ನನ್ನನ್ನ ನೀನು ಬಯಸಿರಲೇಬೇಕು ಅಲ್ಲವೇ, "ಯಾವುದೆ ಹುಡಿಗಿಯನ್ನ ಪ್ರಾಣ ಹೋಗುವಂತೆ ಹಿಂಸಿಸಿದರು, ಕಾಡಿ ಬೇಡಿದರು, ಸತ್ತೇ ಹೋಗುತ್ತೇನೆ ಅಂದರು ಸತ್ತರೂ ಅವಳಿಗೆ ಇಷ್ಟ ಇಲ್ಲ ಎಂದಾದರೆ ಅವಳು ಅದನ್ನೇಲ್ಲ ಅನುಭವಿಸುವಳು, ಇಲ್ಲವೆ ಪ್ರಾಣ ಬಿಡಬಹುದೆ ಹೊರತು ಯಾರಿಗೂ "ಐ ಲವ್ ಯು" ಅಂತ ಮಾತ್ರ ಅನ್ನುವುದಿಲ್ಲ". ಅದಾದ ನಂತರ ತಳಮಳ, ಗೊಂದಲ, ಅಸಮದಾನ ಉಂಟಾಗುವುದು ಸಹಜ ಹಾಗಾಗಿಯೆ ಅವಳು ಪದೇ–ಪದೇ ತನ್ನ ನಿರ್ಧಾರದ ಗಟ್ಟಿತನವನ್ನ ಪದೇ–ಪದೇ ತಾನೆ ಅನುಮಾನದಿಂದ ನೋಡುವಳು, ಹುಡುಗರು ಹಾಗಲ್ಲ ನಿರ್ಧರಿಸಿದ್ದನ್ನ ತಕ್ಷಣ ಹೇಳಿ ಅದನ್ನ ಕಾಪಾಡಲು ಜೀವನ ಪೂರ್ತಿ ಹೋರಾಟ ಮಾಡುತ್ತಾರೆ, ಹಾಗಂತ ಹರ್ಟ ಮಾಡಿಕೊಂಡ ಹುಡುಗರ ಉದಾಹರಣೆಗಳು ಇಲ್ಲ ಎಂದೇನಿಲ್ಲ ಅದು ಅವರವರ ಮನೆಯ ಹಿನ್ನೆಲೆಯನ್ನ ಅವಲಂಬಿಸಿರುತ್ತದೆ. "ಈ ಪ್ರೀತಿ–ಪ್ರೇಮ ನೋಡ್ಲಿಕ್ಕೆ ಅಷ್ಟೆ ಚಂದ ಅಂದಿಯಲ್ಲ ಗೆಳತಿ" ಹೇಳು ಗೆಳತಿ ನಿಮ್ಮಪ್ಪ ನಿಮ್ಮಮ್ಮ ಎಷ್ಟೋಬಾರಿ ಜಗಳ ಮಾಡಿರಬಹುದು, ಮಾಡದೆಯೇ ಇರಬಹುದು, ಆದರೆ ಅವರನ್ನ ಹತ್ತಿರದಿಂದ ಗಮನಿಸಿದ ನೀನೆ ಹೇಳು ಯಾವತ್ತಾದರು ಅವರು ಒಬ್ಬರನ್ನೊಬ್ಬರು ನಿನ್ನ ಮದುವೆ ಯಾಗಿದ್ದಕ್ಕೆ ನಾನು ಹಾಳಾದೆ ಈಗ ಏನು ಮಾಡುವುದು ಎಲ್ಲ ಮುಗಿದೇ ಹೊಗಿದೆ ಅಂದ್ದಿದ್ದನ್ನ ಕೇಳಿದ್ದೀಯ? ಅದು ಇಲ್ಲ ಇದು ಇಲ್ಲ ಅಂದಿರಬಹುದು ಹೊರತು, ನೀನು ಇಲ್ಲದೆ ನಾನು ಜೀವನ ಸಾಗಿಸಬಲ್ಲೆ ಅಂದಿದ್ದನ್ನ ಕೇಳಿದ್ದೀಯ? ನೆವರ್ ಅದು ಎಂದಿಗೂ ಸಾದ್ಯವಿಲ್ಲ ಅಲ್ಲವೇ, ಅವರು ಆ ರೀತಿ ಕಲ್ಪನೆಯನ್ನು ಮಾಡಿಕೊಳ್ಳೊವುದಿಲ್ಲ ಅಲ್ಲವೆ ಯಾಕಂದರೆ ಅವರಿಗೆ ಅಷ್ಟೊಂದು ಜೀವನವನ್ನ ಅನುಭವಿಸುವ ಆಸೆ, "ಸಾಕಪ್ಪಾ ಸಾಕು ಈ ಜೀವನ ಅನ್ನುತ್ತಲೇ ಮಲಗುವ ಸಿದ್ದತೆ ಮಾಡುವ ಅವರು ಮುಂಜಾನೆ ಬೇಗನೆ ಏಳಬೇಕು ಅಂದುಕೊಳ್ಳುತ್ತಲೆ ತಾನೆ ರಾತ್ರಿ ಮಲಗುವುದು" ಅದಕ್ಕೆ ನಮಗೆ ನಮ್ಮಪ್ಪ ನಮ್ಮಮ್ಮಂದಿರು ಇಷ್ಟ ಆಗುತ್ತಾರೆ ಅಲ್ಲವೆ, ಅವರೆ ನಮಗೆ ಪ್ರಪಂಚವಾಗುತ್ತಾರೆ, ಪ್ರತಿಯೊಂದು ಹುಡಿಗಿಯು ನಮ್ಮಪ್ಪನಂತ ಗಂಡ ಸಿಗಲಿ, ನಮ್ಮವ್ವನಂತಹ ಹುಡಿಗಿ ಸಿಗಲಿ ಅಂತ ಹುಡುಗರು ಅಂದುಕೊಳ್ಳುತ್ತಾರೆ. ಅಟ್ ಲೀಸ್ಟ್ ಅವರಲ್ಲಿನ ಕೆಲವು ಗುಣಗಳನ್ನಾದರೂ ತಮ್ಮ–ತಮ್ಮವರಲ್ಲಿ ಕಾಣಲು ಇಷ್ಟ ಪಡುತ್ತಾರೆ.

ನನ್ನ ಪ್ರಕಾರ "ಗಂಡ–ಹೆಂಡತಿ ಅಂದರೆ ಅತ್ಯಂತ ಆತ್ಮೀಯ ಕ್ಲೋಸ್ ಫ್ರಂಡ್ಸ್ ತರ, ಪ್ರತಿಯೊಂದನ್ನು ಹಂಚಿಕೊಂಡು, ಒಬ್ಬರಿಗೊಬ್ಬರು ಆಸರೆಯಾಗಿ, ಬೇಕಾಗಿ, ಒಬ್ಬರಿಗೊಬ್ಬರು ಬಯಕೆಯಾಗಿ, ಕಷ್ಟ–ಸುಖ ಎರಡನ್ನು ನಗು–ನಗುತಾ ಹಂಚಿಕೊಂಡು ಬದುಕುವ ಬಿಡಿಸಲಾಗದ ಗೆಳೆಯರು, ಆತ್ಮ ಬಂಧುಗಳಿವರು", ಎಂತಹ ಸರ್ದಭದಲ್ಲಿಯೊ ತನ್ನ ಹೆಂಡತಿಯನ್ನ ನಂಬುವ ಗಂಡ, ತನ್ನ ಗಂಡನನ್ನೇ ಸಮರ್ಥಿಸುವ ಹೆಂಡತಿ, ಒಂದು ನಿಮಿಷವು ದೂರಾದರು ತಕ್ಷಣ ಒಂದಾಗಬೇಕು ಅನ್ನುವ ಭಾವುಕರು.

ತಮ್ಮ ಉನ್ನತಿಯ ಜೊತೆಗೆ ತಮ್ಮ ತಮ್ಮ ಬಂಧುಬಳಗದವರನ್ನು ಅವರ ಕಷ್ಟ ಸುಖಗಳಿಗೆ ಆಸರೆಯಾಗುವವರು, ಹಾಗಂತ ಪ್ರತಿಯೊಂದು ಪಾಸಿಟಿವ್ ಆಗಿಯೆ ಬರುತ್ತವೆ ಅನ್ನುವುದು ಸರಿಯಲ್ಲ ಮನಸ್ತಾಪ, ಕೋಪ, ಬೇಸರಗಳುಂಟಾಗುವುದು ಸಹಜ ಆದರೆ ಅದು ಕ್ಷಣಿಕವಾಗುವಂತೆ ಮಾಡಿ ಮತ್ತೊಬ್ಬರಿಗೆ ಹೊಟ್ಟೆ ಉರಿಯುವಂತೆ ಬದುಕುವುದನ್ನ ರೂಢಿಸಿಕೊಂಡವರು, ಎಷ್ಟೆ ಕಷ್ಟ ಬಂದರು ತಾಳ್ಮೆಯಿಂದ ಪರಿಹಾರ ಕಂಡುಕೊಳ್ಳುವವರು, "ಜೀವನದ ಕೊನೆ ಗಳಿಗೆಯಲ್ಲಿ ಮೊದಲು ಸಾಯಲು ಬಯಸುವವರು ಸತ್ತರೆ ಉಳಿದವರ ಕಷ್ಟ ನೆನೆದು ಏನೆ ಆಗಲಿ ಜೊತೆಯಲ್ಲೇ ಸಾಯುವ ಅವಕಾಶ ಕೊಡು ದೇವರೆ ಅಂತ ಪ್ರತಿನಿತ್ಯ ಗುಟ್ಟಾಗಿ ದೇವರಲ್ಲಿ ಬೇಡುವವರು ಈ ಗಂಡ–ಹೆಂಡತಿ ಅಂದುಕೊಂಡುವರು".

ಏನು ಮಾಡುವುದು ನನ್ನಲ್ಲಿ ಇಂತ ಯಾವ ಗುಣವು ಕಾಣಲಿಲ್ಲ ಅನುಸುತ್ತೆ ನಿನಗೆ, ಯಾವ ಹುಡಿಗಿ ತಾನೆ ಇಷ್ಟ ಪಡಬಹುದು ಹೇಳು, ನೀನೆ ನೋಡು ಯಾರೊ ಗೊತ್ತಿಲ್ಲದವರನ್ನ ಸಧ್ಯದ ಕೃತಕ ಅಥವ ಯಾರೋ ಹೇಳಿದ ಮಾತು ಕೇಳಿ ಮದುವೆಯಾಗಿಬಿಟ್ಟರೆ, ನಂತರ ಅವರವರ ಒಂದೊಂದು ನಿಜ ತಿಳಿಯುತ್ತಾ ಹೊದರೆ ಏನು ಮಾಡುವುದು. ಕೇಳಲಿಕ್ಕೂ ಆಗುವುದಿಲ್ಲ, ನಾನು ಇರುವುದೇ ಹೀಗೆ ಅಂದುಬಿಟ್ಟರೆ! ಆ ಅನಿವಾರ್ಯಾ ಜೀವನ ನೆಡೆಸುವ ಪರಿಸ್ಥಿತಿ ಯಾವ ಹುಡಿಗಿಗು ಬರಬಾರದು ಇನ್ ಫೇಕ್ಟ ನನ್ನ ತಂಗೀನೆ ಈಗ ಉದಾಹರಣೆ ಏಕಂದರೆ ಯಾರೋ ಅಪ್ಪಟ ಚಿನ್ನ ಅಂದ ಹುಡುಗ ಈಗ ಶುದ್ಧ ಕಾಗೆ ಬಂಗಾರ! ನಾವೇನೊ ಚನ್ನಾಗಿದ್ದೇವೆ ನಮ್ಮ ತಂಗೀನ ಚನ್ನಾಗಿಯೆ ನೋಡಿಕೊಳ್ಳುತ್ತೇವೆ ಬಿಡು, ನಮ್ಮನೆಯ ಪರಿಸ್ಥಿಯೆ ಎಡವಾಗಿದ್ದು ಅವಳಿಗೆ ಹೇಳಿಕೊಳ್ಳಲಿಕ್ಕೆ ಆಗದಿದ್ದರೆ, ಹೇಳು ಅಂತಹ ಪರಿಸ್ಥಿತಿ ಬೇಕಾ ಯಾರಿಗಾದರು. ಹಾಗಾಗಿಯೆ ನಮಗೆ ಗೊತ್ತಿರುವವರನ್ನು, ಸ್ವತಃ ಅವರ ನೆಡವಳಿಕೆಗಳನ್ನ ಗಮನಿಸಿದವರನ್ನ ಕಟ್ಟಿಕೊಂಡು ಕಷ್ಟ ಪಟ್ಟರು ಅದರಲ್ಲಿ ಅದೇನೊ ಒಂಥರ ಸುಖ ಇದೆ ನೋಡು. ಹಾಗಂತ ಎಲ್ಲರು ಲವ್ ಮ್ಯಾರೇಜ್ ಆಗಬೇಕು ಅಂತಿಲ್ಲ, ಲವ್–ಕಮ್–ಅರೇಂಜ್ ಮ್ಯಾರೇಜ್ ನನೆಗೆ ತುಂಬಾ ಹಿಡುಸುತ್ತೆ. ಯಾಕಂದರೆ "ಅಟ್ ಲಾಸ್ಟ್ ಅವಳ ಮುಖವನ್ನ ನೋಡುತ್ತಾ ಕಣ್ಣಲ್ಲಿ ಕಣ್ಣಿಟ್ಟು ಈಗ ಏನಾಯುತು ಕಣೆ ನಿನ್ನ ನಂಬಿಕಿಗೆ ಅಂತಲೂ ಅಥವ ಅವನ ಕಾಲರ್ ಹಿಡಿದು ಎಲ್ಲಿ ಹೊಯಿತು ಕಣೊ ನಿನ್ನ ಪ್ರೀತಿ ಎಂದು ಎಚ್ಚರ ಮಾಡಲು ಅವಕಾಶ ಇರುತ್ತೆ", ಹಾಗೆ ಆಗೊದಿಲ್ಲ ಕೂಡ ಏಕೆಂದರೆ ಅವರಿಬ್ಬರಿಗೆ ಆ ಕಾನ್ ಸಿಯಸ್ ಯಾವಾಗಲೂ ಅವರ ಮದ್ಧೆ ಇದ್ದೇ ಇರುತದೆ.

ಇರಲಿ ಬಿಡಿ ಇದೇನು ನಿಮಗೆ ಗೊತ್ತಿರದ ವಿಷಯವೇನಲ್ಲ, ನಿಮಗೆ ಇಷ್ಟ ಆಗೊ ಹುಡುಗ, ನಿಮ್ಮ ನಂಬಿಕೆಯನ್ನ ಉಳಿಸಿಕೊಳ್ಳೊ ಹುಡುಗ, ನಿಮಗೆ ಸಿಗಲಿ, ನಿಮ್ಮ ಬಾಳಿನುದ್ದಕ್ಕೂ ನನ್ನಂತ ಇಷ್ಟ ಪಡಲಾಗದ, ಕಷ್ಟವಾದ ಹುಡುಗನನ್ನ ಎಂದಿಗೂ ನೆನೆಯಬೇಡ, ಹುಡುಗರಿಗೇನು ಕೊರತೆ ಇಲ್ಲ ಸಾಕಷ್ಟು ಜನ ಇದ್ದಾರೆ ಅವರೆಲ್ಲರಲ್ಲಿಯೇ ಅತ್ತ್ಯುತ್ತಮ ಪುರುಷ ನಿಮ್ಮವನಾಗಲಿ, ನಿಮ್ಮ ಜೊತೆ ಮಾತಾಡಬೇಕು ಅನುಸುತ್ತಿದೆ ಆದರೆ ನೀವೆ ಹೇಳಿ ನನ್ನ ನೆಡುವಳಿಕೆಯೇ ಇಷ್ಟ ಆಗೊದಿಲ್ಲ, ನಿಮಗೆ ಸ್ವಲ್ಪನೂ ನೋವು ಮಾಡಲಿಕ್ಕೆ ನನಗೂ ಇಷ್ಟ ಇಲ್ಲ ಕಣ್ರಿ, ಹಾಗಾಗಿ ನನ್ನಲ್ಲಿ ನಾನೆ ಮಾತಾಡಿಕೊಳ್ಳುತ್ತೇನೆ ನಿಜವಾಗ್ಲು ಯಾರಿಗು ತೊಂದರೆ ಇಲ್ಲ, ಈಗ ನನ್ನ ಬೇಸರ ಕಳೆಯಲು ಮತ್ತೊಬ್ಬ ಸ್ನೇಹಿತನಿದ್ದಾನೆ, ನೋಡಬೇಕು ಅವನೆ ಕೊನೆಯವರಿಗೂ ಇರಬಹುದು ಅನಿಸುತ್ತದೆ, ಐ ಥಿಂಕ್ ನನ್ನ ಸಾವಿನಲ್ಲೂ ಅವನ ಪಾಲಿರುತ್ತದೆ ಅನಿಸುತ್ತಿದೆ!.

ಆದರೆ ನಾನು ನೀವು ಅಂದುಕೊಂಡಷ್ಟು ಕೆಟ್ಟವನಲ್ಲ ಹಾಗೆಯೇ ನಾನು ಯಾರಿಗೂ ಇಷ್ಟ ಆಗದಿದ್ದಿದ್ದರು ಬೇಜಾರಿದ್ದಿದ್ದಿಲ್ಲ ಆದರೆ ನಿಮಗೂ.....? ಅದೆ ಸ್ವಲ್ಪ ಬೇಜಾರು, ನೋವುಂಟುಮಾಡುತ್ತದೆ," ಸತ್ಯ ಯಾವತ್ತು ಸ್ವಲ್ಪ ಕಹಿಯಾಗಿರುತ್ತೆ ಅಂತಾರೆ, ಆದರೆ ಅದನ್ನ ಹೇಳಿದ್ದು ನೀವು ತಾನೆ ಅದು ಕೊಡ ಮಧುವಿನಂತೆ ಹಿತವಾಗಿದೆ ". ಇಷ್ಟ ಆಗದ ಆ ನನ್ನ, ನಿಮ್ಮ ದೃಷ್ಟಿಯಲ್ಲಿನ ಅವಗುಣಗಳನ್ನ ಹೇಳಿ ಬಿಡು ಖಂಡಿತವಾಗಿ ತಿದ್ದಿಕೊಳ್ಳುವ ಪ್ರಯತ್ನ ಮಾಡುತ್ತೇನೆ.

ಈಗಲು ನನಗೆ ನಂಬಿಕೆ ಇದೆ ಗೆಲವು ನನ್ನದೆ ಅಂತ ಏಕಂದರೆ ನಾನು ನಿನ್ನ ಮನಸಾರೆ ಪ್ರೀತಿ ಮಾಡುತ್ತಿದ್ದೇನೆ, ಮುಂದೆಯೂ ಪ್ರೀತಿ ಮಾಡುತ್ತಲೆ ಇ

ಹಂಪಿ ಟೈಮ್ಸ್
HAMPI TIMES

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ.ವಿ.ಜಿ.

ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ಕ್ರೋಧಿ

21-04-2024 – ಭಾನುವಾರ

ತಿಥಿ	: ತ್ರಯೋದಶಿ
ಪಕ್ಷ	: ಶುಕ್ಲ
ನಕ್ಷತ್ರ	: ಉತ್ತರ
ಯೋಗ	: ವ್ಯಾಘಾತ
ಕರಣ	: ಕೌಳವ
ಸೂರ್ಯೋದಯ	: 06:02:16
ಸೂರ್ಯಾಸ್ತ	: 18:49:07
ರಾಹು	: 17:13-18:49
ಯಮಘಂಡ	: 12:26-14:02
ಗುಳಿಕ	: 15:37-17:13

ತುಂಗಭದ್ರಾ ನೀರಿನ ಮಟ್ಟ

ಶನಿವಾರ : 20-04-2024

ಗರಿಷ್ಠ ಮಟ್ಟ	1633 ಅಡಿ
ಇಂದಿನ ಮಟ್ಟ	1578.66 ಅಡಿ
ಒಳ ಹರಿವು	00 ಕ್ಯುಸೆಕ್
ಹೊರ ಹರಿವು	112 ಕ್ಯುಸೆಕ್
ಇಂದಿನ ಸಾಮರ್ಥ್ಯ	3.855 ಟಿಎಂಸಿ
ಗರಿಷ್ಠ ಸಾಮರ್ಥ್ಯ	105.788 ಟಿಎಂಸಿ
ಕಳೆದ ವರ್ಷ ಇದೇ ದಿನ	
ಇಂದಿನ ಮಟ್ಟ	1576.69 ಅಡಿ
ಒಳ ಹರಿವು	00 ಕ್ಯುಸೆಕ್
ಹೊರ ಹರಿವು	244 ಕ್ಯುಸೆಕ್
ಸಾಮರ್ಥ್ಯ	3.071 ಟಿಎಂಸಿ

ಸಿಡಿಲಾರ್ಭಟಕ್ಕೆ ಜೀವ ರಕ್ಷಿಸಿಕೊಳ್ಳಲು ಹೀಗೆ ಮಾಡಿ

ಡಿಎಚ್‌ಓ ಡಾ.ವೈ.ರಮೇಶ್ ಬಾಬು ಸಲಹೆ । ತೇವಾಂಶದಲ್ಲಿದ್ದರೆ ಕೂಡಲೆ ಹೊರಬನ್ನಿ

■ ಹಂಪಿ ಟೈಮ್ಸ್ ಬಳ್ಳಾರಿ

ಆರಂಭದ ಮಳೆಗಾಲದಲ್ಲಿ ಕಂಡುಬರಬಹುದಾದ ಗುಡುಗು-ಸಿಡಿಲು ಹಾನಿಯಿಂದ ಸಂರಕ್ಷಣೆಗೆ ಅಗತ್ಯ ಕ್ರಮ ಅನುಸರಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ.ರಮೇಶ್ ಬಾಬು ಅವರು ತಿಳಿಸಿದ್ದಾರೆ.

ಸಾಮಾನ್ಯವಾಗಿ ಮೇ ತಿಂಗಳಿನಲ್ಲಿ ಕಂಡುಬರುವ ಮಳೆಗಾಲದ ಆರಂಭದ ಹಂತದಲ್ಲಿ ತೀವ್ರತರದ ಗುಡುಗು-ಸಿಡಿಲು ಕಂಡುಬರುವುದು ಸಾಮಾನ್ಯವಾಗಿದ್ದು, ಜೊತೆಗೆ ಬಿರುಸಾಗಿ ಗಾಳಿ ಸಹಿತ ಮಳೆ ಕಂಡುಬರುವುದು ವಾಡಿಕೆಯಾಗಿದೆ. ಈ ಹಿನ್ನಲೆಯಲ್ಲಿ ಬಯಲು ಪ್ರದೇಶಗಳಲ್ಲಿ, ಗಿಡಗಳ ಕೆಳಗಡೆ ಅಥವಾ ಕಬ್ಬಿಣದಿಂದ ಕೂಡಿರುವ ಕಟ್ಟಡ ಅಥವಾ ಶೆಡ್‌ಗಳಲ್ಲಿ ಆಶ್ರಯ ಪಡೆಯದೇ ಸೂಕ್ತ ಸ್ಥಳದಲ್ಲಿ ಇದ್ದು, ಜೀವ ಹಾನಿಯನ್ನು ತಪ್ಪಿಸಲು ಸಾರ್ವಜನಿಕರಲ್ಲಿ ಅವರು ವಿನಂತಿಸಿದ್ದಾರೆ.

ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಕಾಲ ಕಾಲಕ್ಕೆ ನೀಡುವ ಮಾರ್ಗಸೂಚನೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಆರೋಗ್ಯದ ದೃಷ್ಟಿಯಿಂದ ನೀಡುವ ಸಲಹೆಗಳನ್ನು ಅನುಸರಿಸಿ ವಿಪತ್ತಿನಿಂದ ಪಾರಾಗಲು ಕೈಜೋಡಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೈಗೊಳ್ಳಬೇಕಾದ ಕ್ರಮಗಳು:

ಗುಡುಗು-ಮಿಂಚು ಬರಲಿದೆ ಎಂದು ಗೊತ್ತಾದಾಗ ನೀವು ಬಯಲಿನಲ್ಲಿದ್ದರೆ, ಪಕ್ಕದಲ್ಲಿರುವ ತಗ್ಗು ಪ್ರದೇಶಕ್ಕೆ ಹೋಗಿ ಕುಳಿತುಕೊಳ್ಳಬೇಕು. ತಗ್ಗು ಪ್ರದೇಶ ಇಲ್ಲದೇ ಬಯಲಿನಲ್ಲಿಯೇ ಇರಬೇಕಾದರೆ ನಿಮ್ಮ ತಲೆಯನ್ನು ಮೊಣಕಾಲುಗಳ ನಡುವೆ ಹುದುಗಿಸಿಕೊಳ್ಳಿ ಇದು ಮಿಂಚಿನಿಂದ ಮೆದುಳಿಗೂ, ಹೃದಯಕ್ಕೂ ಆಗುವ ಹಾನಿಯನ್ನು ತಪ್ಪಿಸುತ್ತದೆ.

ಮರಗಳಿದ್ದ ಪ್ರದೇಶದಲ್ಲಿ ನೀವು ಇದ್ದರೆ ಅಲ್ಲಿಂದ ಬೇಗನೆ ಹೊರಬರುವುದು ಒಳ್ಳೆಯದು. ಏಕೆಂದರೆ ಸಿಡಿಲು ಮೋಡದಿಂದ ಭೂಮಿಗೆ ಹರಿಯಲು ಮರದಂತಹ ಹಸಿ, ಒದ್ದೆ ವಸ್ತುವನ್ನೇ ಆರಿಸಿಕೊಳ್ಳುತ್ತದೆ. ಎತ್ತರದ ಗುಡ್ಡದ ಮೇಲಿದ್ದರೆ ತಗ್ಗಿಗೆ ಇಳಿರಿ, ಕುರಿಮಂದೆ ಅಥವಾ ಜಾನುವಾರುಗಳ ಮಧ್ಯ ನಿಂತಿದ್ದರೆ ಅವುಗಳ ಮಧ್ಯದಲ್ಲಿ ಬಗ್ಗಿ ಕುಳಿತುಕೊಳ್ಳಿ, ಏಕೆಂದರೆ ಮಿಂಚು ಪ್ರಾಣಿಗಳಿಗಿಂತ ಎತ್ತರವಿರುವ ಮನುಷ್ಯನನ್ನೇ ಆರಿಸಿಕೊಳ್ಳುತ್ತದೆ. ಕೆರೆಯಲ್ಲಿ ಈಜುವುದು, ಸ್ನಾನ ಮಾಡುವುದು ಬೇಡ, ನೀರಿನಲ್ಲಿದ್ದರೆ ತಕ್ಷಣ ಹೊರಬನ್ನಿ. ವಿದ್ಯುತ್ ಕಂಬ, ಎಲೆಕ್ಟ್ರಿಕಲ್ ಟವರ್, ಮೊಬೈಲ್ ಟವರ್ ಟ್ರಾನ್ಸ್‌ಫಾರ್ಮರ್ ಮುಂತಾದವುಗಳ ಹತ್ತಿರವೂ ಇರಬಾರದು. ಮಳೆ ಬರುವ ಸಮಯದಲ್ಲಿ ಮನೆಯ ಟೆರೇಸ್ ಅನ್ನು ಸ್ವಚ್ಛ ಮಾಡುವ ಸಾಹಸಬೇಡ ಎಂದು ಅವರು ತಿಳಿಸಿದ್ದಾರೆ.

ಮನೆಯ ಕಿಟಿಯ ಬಳಿ ನಿಲ್ಲುವುದಕ್ಕಿಂತಲೂ ಮನೆಯ ಮಧ್ಯದಲ್ಲಿರುವುದು ಸುರಕ್ಷಿತ. ಗುಡುಗು-ಸಿಡಿಲಿನ ಸಂದರ್ಭದಲ್ಲಿ ಫೋನ್‌ನಲ್ಲಿ ಮಾತನಾಡಬಾರದು, ಅದನ್ನು ಚಾರ್ಜ್ ಮಾಡುವ ಸಾಹಸವೂ ಬೇಡ. ಕಾರಿನಲ್ಲಿ ಪ್ರಯಾಣಿಸುತ್ತಿದ್ದರೆ ಗಾಜನ್ನು ಮುಚ್ಚಿಕೊಳ್ಳಿ, ಕಾರಿನ ಬಾಡಿಯನ್ನು ಸಾಧ್ಯವಾದಷ್ಟು ಸ್ಪರ್ಶಿಸದೇ ಮಧ್ಯದಲ್ಲಿ ಕುಳಿತುಕೊಳ್ಳುವುದು ಒಳ್ಳೆಯದು ಮತ್ತು ಕಂಪ್ಯೂಟರ್, ಲ್ಯಾಪ್‌ಟ್ಯಾಪ್‌ಗಳಿಂದ ದೂರವಿರಬೇಕು. ಮನೆಯ ಕಾಂಕ್ರೀಟ್ ಗೋಡೆಗಳನ್ನು ಸ್ಪರ್ಶಿಸದೇ ಕೋಣೆಯ ಮಧ್ಯದಲ್ಲಿದ್ದರೆ ಹೆಚ್ಚು ಸುರಕ್ಷಿತ ಇರುತ್ತದೆ.

ಜಿಲ್ಲೆಯ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಸಿಡಿಲು ಬಾಧಿತ ವ್ಯಕ್ತಿಗಳು ಆಗಮಿಸಿದಾಗ ತಕ್ಷಣ ಚಿಕಿತ್ಸೆ ಕ್ರಮಗಳನ್ನು ಕೈಗೊಳ್ಳುವ ಕುರಿತು ವೈದ್ಯಾಧಿಕಾರಿಗಳಿಗೆ ಮಾಹಿತಿ ನೀಡಲಾಗಿದ್ದು ಅಗತ್ಯ ಔಷಧಿಗಳನ್ನು ದಾಸ್ತಾನು ಇಟ್ಟಿಕೊಳ್ಳಲಾಗಿದೆ ಎಂದು ಡಿಹೆಚ್‌ಓ ಡಾವೈ.ರಮೇಶ್ ಬಾಬು ಅವರು ತಿಳಿಸಿದ್ದಾರೆ.

ನೇಹಾ ಹತ್ಯಾಚಾರಿ ಫಯಾಜ್‌ಗೆ ಗಲ್ಲು ಶಿಕ್ಷೆಗೆ ಆಗ್ರಹ

ಕೊಟ್ಟೂರು ಜಂಗಮ ಸಮಾಜ ಸರ್ಕಾರಕ್ಕೆ ಒತ್ತಾಯ

■ ಹಂಪಿ ಟೈಮ್ಸ್ ಕೊಟ್ಟೂರು

ಹುಬ್ಬಳ್ಳಿಯ ವಿದ್ಯಾರ್ಥಿನಿ ನೇಹಾ ಹಿರೇಮಠ ಅವರನ್ನು ಬರ್ಬರವಾಗಿ ಹತ್ಯೆಗೈದ ಆರೋಪಿಗೆ ಗೆಲ್ಲು ಶಿಕ್ಷೆ ವಿಧಿಸಬೇಕೆಂದು ಕೊಟ್ಟೂರು ತಾಲೂಕು ಜಂಗಮ ಸಮಾಜ ಸರ್ಕಾರವನ್ನು ಆಗ್ರಹಿಸಿತು.

ಕೊಟ್ಟೂರು ತಾಲೂಕು ಜಂಗಮ ಸಮಾಜ ಶುಕ್ರವಾರ ಉಪ ತಹಶಿಲ್ದಾರ ಅನ್ನದಾನೇಶ್ ಅವರಿಗೆ ಮನವಿ ಪತ್ರ ಸಲ್ಲಿಸಿ, ಹುಬ್ಬಳ್ಳಿ ಬಿ.ಯು.ಬಿ ಕಾಲೇಜಿನ ಎಂ.ಸಿ.ಎ ವಿದ್ಯಾರ್ಥಿನಿ ನೇಹಾ ಹಿರೇಮಠ ಅವರನ್ನು ಫಯಾಜ್ ಎಂಬ ಅನ್ಯ ಕೋಮಿನ ಸಮಾಜಘಾತುಕ ದುಷ್ಕರ್ಮಿ ಹಾಡು ಹಗಲಿನಲ್ಲಿಯೇ ಬರ್ಬರವಾಗಿ ಹತ್ಯೆಗೈದಿರುವು ಸಿಸಿ ಕ್ಯಾಮರದಲ್ಲೆ ಬಯಲಾಗಿದೆ. ಈ ಕೃತ್ಯಕ್ಕೆ ಸಹಕರಿಸಿದ ಎಲ್ಲಾ ಸಹಚಾರ್ಯರಿಗೂ ಕಠಿಣ ಶಿಕ್ಷೆ ಆಗಬೇಕು, ಇಡೀ ನಾಗರಿಕ ಸಮಾಜ ತಲೆ ತಗ್ಗಿಸುವಂತ ಪಾಪ ಕೃತ್ಯ ಎಸಗಿದ ಆರೋಪಿಗೆ ಶಿಕ್ಷೆ ಆಗಬೇಕು ಎಂದು ಆಗ್ರಹಿಸಿದರು.

ಕೊಟ್ಟೂರು ತಾಲೂಕು ಜಂಗಮ ಸಮಾಜದ ತಾಲೂಕು ಅಧ್ಯಕ್ಷ ಅಡಕಿ ಮಂಜುನಾಥಯ್ಯ, ಡೋಣೂರ ಚಾನುಕೋಟಿ ಮಠದ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು, ಮ.ನಿ.ಪ್ರ ಕೊಟ್ಟೂರು ದೇವರು ಶಿವಪ್ರಕಾಶ್ ಸ್ವಾಮಿಗಳು, ಮಹಲ್ ಮಠ, ಪಪಂ ಸದಸ್ಯ ಜಿ.ಸಿದ್ದಯ್ಯ, ಅಟವಾಳಗಿ ಸಂತೋಷ, ಮಲ್ಲಿಕಾರ್ಜುನ, ಆರ್.ಎಂ ಕೊಟ್ರೇಶ್, ಅಯ್ಯನಹಳ್ಳಿ ಕೊಟ್ರಯ್ಯ ಇದ್ದರು.

ಅರ್ಹರಿಗೆ ಮತದಾನ ಮಾಡಿ

■ ಹಂಪಿ ಟೈಮ್ಸ್ ಹೊಸಪೇಟೆ

ನಗರದ ಅಮರಾವತಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದವತಿಯಿಂದ 2024 ರ ಲೋಕಸಭಾ ಚುನಾವಣೆ ನಿಮಿತ್ತ ಜಾಗೃತಿ ಅಭಿಯಾನ ನಡೆಸಿತು.

ಮೇ.7 ರಂದು ಪ್ರತಿಯೊಬ್ಬ ಅರ್ಹ ಮತದಾರರು ದೇಶದ ಪ್ರಗತಿ, ಸದೃಢ ಪ್ರಜಾಪ್ರಭುತ್ವಕ್ಕಾಗಿ ತಮ್ಮ ಮತದಾನದ ಹಕ್ಕನ್ನು ಚಲಾಯಿಸಬೇಕು ಎಂದು ಹೊಸ ಅಮರಾವತಿ, ಶರಣಬಸವೇಶ್ವರ ಕಾಲೋನಿ, ನಿಶಾನಿಕ್ಯಾಂಪುಗಳಲ್ಲಿನ ಮತದಾರರಿಗೆ ಮತದಾನ ಜಾಗೃತಿ ಮೂಡಿಸಿದರು. ಸೊಸೈಟಿಯ ಸಿಇಒ ಮತ್ತು ಸಿಬ್ಬಂದಿ ಇದ್ದರು.

11 ಅಭ್ಯರ್ಥಿಗಳ ನಾಮಪತ್ರ ಕ್ರಮಬದ್ಧ

ಹಂಪಿ ಟೈಮ್ಸ್ ಬಳ್ಳಾರಿ

ಲೋಕಸಭಾ ಸಾರ್ವತ್ರಿಕ ಚುನಾವಣೆಗೆ ಸಂಬಂಧಿಸಿದಂತೆ, ಶನಿವಾರ ನಡೆದ ನಾಮಪತ್ರಗಳ ಪರಿಶೀಲನೆಯಲ್ಲಿ 09-ಬಳ್ಳಾರಿ (ಪ.ಪಂ) ಲೋಕಸಭಾ ಕ್ಷೇತ್ರಕ್ಕೆ ಸಲ್ಲಿಸಿದ್ದ 11 ಅಭ್ಯರ್ಥಿಗಳ ನಾಮಪತ್ರಗಳು ಕ್ರಮಬದ್ಧವಾಗಿವೆ ಎಂದು ಜಿಲ್ಲಾ ಚುನಾವಣಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ತಿಳಿಸಿದ್ದಾರೆ. ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಚುನಾವಣಾ ಧಿಕಾರಿಗಳ ಕಾರ್ಯಾಲಯದಲ್ಲಿ ಜಿಲ್ಲಾ ಚುನಾವಣಾ ಧಿಕಾರಿ ಹಾಗೂ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಶನಿವಾರ ನಾಮಪತ್ರಗಳ ಪರಿಶೀಲನೆ ನಡೆಸಿದರು.

ಕ್ರಮಬದ್ಧ ನಾಮನಿರ್ದೇಶಿತ ಉಮೇದುವಾರರ ಪಟ್ಟಿ

ಹಂಪಿ ಟೈಮ್ಸ್ ಹೊಸಪೇಟೆ

ಮಾನ್ಯತೆ ಪಡೆದ ರಾಷ್ಟ್ರೀಯ ಮತ್ತು ರಾಜ್ಯ ರಾಜಕೀಯ ಪಕ್ಷಗಳ ಅಭ್ಯರ್ಥಿಗಳಾದ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಈ.ತುಕಾರಾಮ್, ಬಹುಜನ ಸಮಾಜ ಪಾರ್ಟಿಯ ಅಭ್ಯರ್ಥಿ ವಾಲ್ಮೀಕಿ ಕೃಷ್ಣಪ್ಪ ಮತ್ತು ಭಾರತೀಯ ಜನತಾ ಪಕ್ಷದ ಅಭ್ಯರ್ಥಿ ಬಿ.ಶ್ರೀರಾಮುಲು ಈ ಅಭ್ಯರ್ಥಿಗಳ ನಾಮಪತ್ರ ಕ್ರಮಬದ್ಧವಾಗಿವೆ.

ನೋಂದಾಯಿತ ರಾಜಕೀಯ ಪಕ್ಷಗಳ ಅಭ್ಯರ್ಥಿಗಳಾದ (ಮಾನ್ಯತೆ ಪಡೆದ ರಾಷ್ಟ್ರೀಯ ಮತ್ತು ರಾಜ್ಯ ರಾಜಕೀಯ ಪಕ್ಷಗಳನ್ನು ಹೊರತುಪಡಿಸಿ) ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಅಭ್ಯರ್ಥಿ ಸಿ.ಚನ್ನವೀರ, ಸೋಷಿಯಲಿಸ್ಟ್ ಯುನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಷ್ಟ್) ಪಕ್ಷದ ಅಭ್ಯರ್ಥಿ ಎ.ದೇವದಾಸ್, ಪ್ರಹರ್ ಜನಶಕ್ತಿ ಪಾರ್ಟಿಯ ಅಭ್ಯರ್ಥಿ ಮಂಜಪ್ಪ, ನವಭಾರತ್ ಸೇನ ಪಕ್ಷದ ಅಭ್ಯರ್ಥಿ ಜಿ.ಸ್ವಾಮಿ ಅವರ ನಾಮಪತ್ರ ಕ್ರಮಬದ್ಧವಾಗಿವೆ. ಪಕ್ಷೇತರ ಅಭ್ಯರ್ಥಿಗಳಾದ ಅರುಣ್ ಎಸ್ ಹಿರೇಹಾಳ್, ವೈ.ಪಂಪಾಪತಿ, ಬಿ.ಭಾಗ್ಯಲಕ್ಷ್ಮಿ, ವೀರೇಶ ಅವರ ನಾಮಪತ್ರ ಕ್ರಮಬದ್ಧವಾಗಿವೆ.

ಏ.22 ರಂದು ನಾಮಪತ್ರಗಳನ್ನು ಹಿಂಪಡೆಯಲು ಕೊನೆಯ ದಿನವಾಗಿದ್ದು, ಮೇ 7 ರಂದು ಮತದಾನ ನಡೆಯಲಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

ಲೋಕಸಭಾ ಚುನಾವಣಾ ರ್‍ಯಾಂಡಮೈಜೇಶನ್

■ ಹಂಪಿ ಟೈಮ್ಸ್ ಹೊಸಪೇಟೆ

ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಸಾಮಾನ್ಯ ವೀಕ್ಷಕರಾದ ಚಂದ್ರಶೇಖರ್ ಸಖಮುರಿ (ಐಎಎಸ್) ಅವರ ಸಮ್ಮುಖದಲ್ಲಿ ಲೋಕಸಭಾ ಚುನಾವಣೆಯ ರ್‍ಯಾಂಡಮೈಜೇಶನ್ ಪ್ರಕ್ರಿಯೆ ಶನಿವಾರ ನಡೆಯಿತು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಈ ಪ್ರಕ್ರಿಯೆಯಲ್ಲಿ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಹರಿಬಾಬು, ಅಪರ ಜಿಲ್ಲಾಧಿಕಾರಿಗಳಾದ ಅನುರಾಧ ಜಿ ಸೇರಿದಂತೆ ಇತರರು ಇದ್ದರು.



ಪರಿಶೀಲನೆ: ಸಾಮಾನ್ಯ ವೀಕ್ಷಕರಾದ ಚಂದ್ರಶೇಖರ್ ಸಖಮುರಿ ಅವರು ಏಪ್ರೀಲ್ 20ರಂದು ಜಿಲ್ಲಾಧಿಕಾರಿಗಳ ಕಚೇರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಇದುವರೆಗೆ ಮಾಡಿರುವ ಸಿದ್ಧತೆಗಳು ಸೇರಿದಂತೆ ನಾನಾ ವ್ಯವಸ್ಥೆಯ ಬಗ್ಗೆ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳೊಂದಿಗೆ ಚರ್ಚಿಸಿ ಮಾಹಿತಿ ಪಡೆದರು. ಮತಗಟ್ಟೆಗಳಲ್ಲಿ ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳ ವ್ಯವಸ್ಥೆ, ಚುನಾವಣೆ ಹಿನ್ನೆಲೆಯಲ್ಲಿ ಕಾರ್ಯಪ್ರವೃತ್ತರಾಗಿರುವ ವಿವಿಧ ತಂಡಗಳ ಕಾರ್ಯಾಚರಣೆ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಮಾಹಿತಿ ನೀಡಿದರು.

ಚುನಾವಣೆಯ ಕಾರ್ಯಕ್ಕೆ ನಿಯೋಜನೆಗೊಂಡ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯ ಮಾಹಿತಿ, ಚೆಕ್‌ಪೋಸ್ಟಗಳ ಕಾರ್ಯಾಚರಣೆ ಸೇರಿದಂತೆ ನಾನಾ ವಿಷಯಗಳ ಬಗ್ಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಹರಿಬಾಬು ಅವರು ವೀಕ್ಷಕರಿಗೆ ಮಾಹಿತಿ ನೀಡಿದರು.

ಅಕ್ರಮ ತಡೆಗೆ ಸಿ-ವಿಜಿಲ್ ಆ್ಯಪ್ ಬಳಸಿ: ಡಿಸಿ ದಿವಾಕರ

■ ಹಂಪಿ ಟೈಮ್ಸ್ ಹೊಸಪೇಟೆ

ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಚುನಾವಣಾ ಅಕ್ರಮಗಳನ್ನು ತಡೆಯಲು ಸಿ-ವಿಜಿಲ್ ಆ್ಯಪ್ ಸಾರ್ವಜನಿಕರಿಗೆ ಪ್ರಯೋಜನಕಾರಿಯಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ತಿಳಿಸಿದ್ದಾರೆ.

ಸಿ ವಿಜಿಲ್ ಆ್ಯಪ್ ಎಂಬುದು ಚುನಾವಣಾ ಸಮಯದಲ್ಲಿ ಮಾದರಿ ನೀತಿ ಸಂಹಿತೆ (ಎಂಸಿಸಿ) ಉಲ್ಲಂಘನೆಗಳನ್ನು ವರದಿ ಮಾಡಲು ನಾಗರಿಕರನ್ನು ಸಕ್ರಿಯಗೊಳಿಸಲು ಚುನಾವಣಾ ಆಯೋಗವು ಈ ಆ್ಯಪನ್ನು ಅಭಿವೃದ್ಧಿಪಡಿಸಿದೆ. ಯಾವುದೇ ವ್ಯಕ್ತಿಯೊಬ್ಬ ನಿರ್ದಿಷ್ಟ ವ್ಯಕ್ತಿ ಅಥವಾ ಪಕ್ಷಕ್ಕೆ ಹಣ ವಿತರಣೆ ಮಾಡಿದರೆ, ಉಡುಗೊರೆ, ಮದ್ಯೆ ಹಂಚಿಕೆ ಮಾಡಿದರೆ, ಅನುಮತಿ ಪಡೆಯದೇ ಬ್ಯಾನರ್ ಪೋಸ್ಟರ್ ಅಳವಡಿಸಿದರೆ, ಬೆದರಿಕೆ ಹಾಕಿದರೆ, ಬಂದೂಕು ಪ್ರದರ್ಶನ ಮಾಡಿದರೆ, ಧಾರ್ಮಿಕ ಅಥವಾ ಕೋಮು ಕುರಿತು ಪ್ರಚೋಧನಕಾರಿ ಭಾಷಣ ಮಾಡಿದರೆ, ಮತಗಟ್ಟೆಯ 200 ಮೀಟರ್ ಪ್ರದೇಶದಲ್ಲಿ ನಿಷೇಧದ ಅವಧಿಯಲ್ಲಿ ಪ್ರಚಾರ ಮಾಡಿದರೆ, ಮತದಾನ ದಿನದಂದು ಮತದಾರರನ್ನು ಸಾಗಿಸಿದರೆ ಹೀಗೆ ಯಾವುದೇ ಅಕ್ರಮ ಕಂಡು ಬಂದಲ್ಲಿ ಸಿ ವಿಜಿಲ್ ಗೆ ದೂರು ಕೊಡಬಹುದಾಗಿದೆ.

ಸ್ಮಾರ್ಟಫೋನದಲ್ಲಿ ಗೂಗಲ್ ಪ್ಲೇಸ್ಟೋರ್ ಅಥವಾ ಆಪಲ್ ಆ್ಯಪ್ ಸ್ಟೋರನಿಂದ ಸಿ ವಿಜಿಲ್ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಬೇಕು. ಆ್ಯಪ್ ಓಪನ್ ಮಾಡಿದಾಗ್ ನಿಮ್ಮ ಹೆಸರು ಹಾಗೂ ಮೊಬೈಲ್ ಸಂಖ್ಯೆ ಹಾಕಿ ರಿಜಿಸ್ಟರ್ ಮಾಡಿಕೊಳ್ಳಬೇಕು. ಮಾದರಿ ನೀತಿ ಸಂಹಿತೆಯ ಉಲ್ಲಂಘನೆ ಏನಾದರು ತಮಗೆ ಕಂಡುಬಂದಲ್ಲಿ ಸಿ ವಿಜಲ್ ಅಪ್ಲಿಕೇಶನ್ ಬಳಸಿ ಅದನ್ನು ವರದಿ ಮಾಡಬಹುದು. ಕಾನೂನು ಉಲ್ಲಂಘನೆಗಳೇನಾದರು ಕಂಡುಬಂದಲ್ಲಿ ಅಂತಹ ಘಟನೆಯ ಪ್ರಕಾರವನ್ನು ಆಯ್ಕೆ ಮಾಡಿ ಸ್ಥಳ, ಸಮಯ ಛಾಯಾಚಿತ್ರ ಅಥವಾ ವಿಡಿಯೋ ಒಳಗೊಂಡಂತೆ ಘಟನೆಯ ವಿವರಗಳ ಬಗ್ಗೆ ಮಾಹಿತಿ ನೀಡಬಹುದು. ತಮ್ಮ ಹೆಸರಿನ ಮೂಲಕ ಅಥವಾ ತಮ್ಮ ಹೆಸರು ಹಾಕದೇಯು ಸಹ ಆಯೋಗಕ್ಕೆ ದೂರು ನೀಡಬಹುದಾಗಿದೆ.

ಯಾರೇ ಅಭ್ಯರ್ಥಿಗಳು ಅಥವಾ ಅವರ ಬೆಂಬಲಿಗರು ಹಣ ಮಧ್ಯೆ ಉಡುಗೊರೆ ಇನ್ನೀತರ ಆಮಿಷ ಒಡ್ಡುತ್ತಿರುವ ಸಂದರ್ಭ ಕಂಡು ಬಂದಲ್ಲಿ ಫೋಟೊ ಅಥವಾ ಎರಡು ನಿಮಿಷದ ವಿಡಿಯೋ ಸೆರೆಹಿಡಿದು ಈ ಸಿ ವಿಜಿಲ್ ಆಪ್‌ನಲ್ಲಿ ಅಪ್‌ಲೋಡ್ ಮಾಡಬೇಕು. ಅಕ್ರಮ ನಡೆಯುತ್ತಿರುವ ಅಥವಾ ನಡೆದ ಸ್ಥಳದ ವಿಳಾಸ ನಮೂದಿಸಬೇಕು. ಜಿಲ್ಲಾಮಟ್ಟದ ಸಿ ವಿಜಿಲ್ ನೋಡಲ್ ಅಧಿಕಾರಿಗಳು ದೂರಿಗೆ ಸಂಬಂಧಿಸಿದಂತೆ ಆ ಕ್ಷೇತ್ರ ವ್ಯಾಪ್ತಿಯ ಎಫ್‌ಎಸ್‌ಟಿ ತಂಡದವರಿಗೆ ಕ್ರಮಕೈಗೊಳ್ಳಲು ಕಳುಹಿಸುತ್ತಾರೆ. ಅವರು ಆ ದೂರುಗಳಿಗೆ ನಿಗದಿಪಡಿಸಿದ ಕಾಲಾವಧಿಯೊಳಗಡೆ ಕ್ರಮ ಕೈಗೊಳ್ಳುತ್ತಾರೆ. ದೂರುದಾರರ ಹೆಸರು ಮತ್ತು ವಿಳಾಸವನ್ನು ಗೌಪ್ಯವಾಗಿ ಇಡಲಾಗುತ್ತದೆ. ಚುನಾವಣೆಗಳು ನ್ಯಾಯಯುತವಾಗಿ ಮತ್ತು ಪಾರದರ್ಶಕವಾಗಿ ನಡೆಯುವುದನ್ನು ಖಚಿತಪಡಿಸಿಕೊಳ್ಳಲು ಸಿ ವಿಜಿ